ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN (E): 2582-2284
Vol-1 Issue 1, July-August 2019, 21-33
©IIMRD, Mysuru
IIMRD JOURNALS
www.iimrd.com

# ಟೋಕ್ರೆ ಕೋಲಿ ಸಮುದಾಯ: ಒಂದು ಅವಲೋಕನ

ಡಾ. ಎಲ್. ಶ್ರೀನಿವಾಸ[1]

**ಪೀಠಿಕೆ:**

ಕರ್ನಾಟಕದಲ್ಲಿ ಹಲವು ಬಗೆಯ ಆದಿವಾಸಿ ಸಮುದಾಯಗಳಿವೆ. ಈ ಸಮುದಾಯಗಳ ಸಮಗ್ರ ಅಧ್ಯಯನ ಆಗಿಲ್ಲ. ಜೊತೆಗೆ ಬ್ರಿಟಿಷರ ಕಾಲದಲ್ಲಿ ನಡೆದ ಅಧ್ಯಯನಗಳನ್ನು ಆಧಾರವಾಗಿಟ್ಟುಕೊಂಡು ಅರ್ಥ ಮಾಡಿಕೊಳ್ಳುವ ಮತ್ತು ಅಭಿವೃದ್ಧಿ ಯೋಜನೆಗಳನ್ನು ಹಾಕಿಕೊಳ್ಳುವ ಪ್ರಕ್ರಿಯೆಗಳು ನಡೆಯುತ್ತಿವೆ. ಇದರಿಂದ ಸಮುದಾಯಗಳ ಮೇಲೆ ಅನೇಕ ಪರಿಣಾಮಗಳಾಗುತ್ತಿವೆ. ಏಕೆಂದರೆ ಸ್ವಾತಂತ್ರ್ಯ ಬಂದ ನಂತರ ಈ ಸಮುದಾಯಗಳಲ್ಲಿ ಹಲವು ಬದಲಾವಣೆಗಳಾಗಿವೆ. ಬಂಡವಾಳಶಾಹಿ ಸಂಸ್ಕೃತಿ ಮತ್ತು ಜಾಗತೀಕರಣ ಈ ಸಮುದಾಯಗಳ ಮೇಲೆ ಆಕ್ರಮಣ ಮಾಡಿದೆ. ಇದಕ್ಕೆ ಬಲಿಯಾಗಿರುವ ಸಮುದಾಯಗಳು ಹಲವು ಬಗೆಯ ಸಮಸ್ಯೆಗಳನ್ನು ಅನುಭವಿಸುತ್ತಿವೆ. ಈ ಹಿಂದಿನ ಅಧ್ಯಯನಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತಿರುವುದರಿಂದ ಸಮುದಾಯಗಳ ಪ್ರಸ್ತುತದ ಸ್ಥಿತಿಗತಿಯನ್ನು ಗುರುತಿಸಿದಂತಾಗುವುದಿಲ್ಲ. ಅಲ್ಲದೆ ವಸಾಹತುಶಾಹಿ ಕಾಲದಲ್ಲಿ ನಡೆದ ಅಧ್ಯಯನಗಳು ಹಲವು ಪೂರ್ವನಿಯೋಜಿತ ಉದ್ದೇಶಗಳನ್ನು ಹೊಂದಿದ್ದವು. ಪ್ರಮುಖವಾಗಿ ಭಾರತದ ಸಮುದಾಯಗಳನ್ನು ಅಧ್ಯಯನ ಮಾಡಿ ಅರ್ಥ ಮಾಡಿಕೊಳ್ಳುವ ಉದ್ದೇಶವಿತ್ತು. ಆ ಕಾರಣಕ್ಕಾಗಿಯೇ ಮಾಹಿತಿಯನ್ನು ಸಂಗ್ರಹಿಸುವುದಕ್ಕೆ ಆರಂಭಿಸಿದರು. ಆದರೆ ಸಿಕ್ಕ ಮಾಹಿತಿಯನ್ನು ವಿಶ್ಲೇಷಣೆ ಮಾಡುವುದಕ್ಕೆ ಹೆಚ್ಚು ಪ್ರಯತ್ನಪಡಲಿಲ್ಲ. ಹಾಗಾಗಿ ಸಮುದಾಯಗಳಲ್ಲಿರುವ ಭಿನ್ನತೆಯನ್ನು ಗುರುತಿಸುವುದಕ್ಕೆ ಸಾಧ್ಯವಾಗಿಲ್ಲ, ಜೊತೆಗೆ ಭಾರತದ ಅಥವಾ ಕರ್ನಾಟಕದ ಆದಿವಾಸಿ ಸಮುದಾಯಗಳು ಒಂದೇ ಎನ್ನುವ ಗ್ರಹಿಕೆ ಇತ್ತು. ವಸಾಹತುಶಾಹಿ ಆಡಳಿತ ವ್ಯವಸ್ಥೆಗೆ ಒಳಗಾದ ಆದಿವಾಸಿ ಸಮುದಾಯಗಳನ್ನು 'ಅಪರಾಧಿ ಅದಿವಾಸಿ'ಗಳು ಎನ್ನುವ ಹಣೆಪಟ್ಟಿಯನ್ನು ಹೊರಿಸಿ ಪೂರ್ವಗ್ರಹದಿಂದ ಅಧ್ಯಯನ ಮಾಡಿದರು. ವಸಾಹತೋತ್ತರ ಕಾಲಘಟ್ಟದಲ್ಲೂ ಈ ಅಧ್ಯಯನ ವಿಧಾನ ಮುಂದುವರೆಯಿತು. ಹಾಗಾಗಿ ಸಮುದಾಯಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವ ವಿಧಾನ ಆರಂಭ ಆಗಲಿಲ್ಲ. ಈಚೆಗೆ ಪ್ರತಿಯೊಂದು ಸಮುದಾಯಕ್ಕೂ ಪ್ರತ್ಯೇಕವಾದ ಅಸ್ಮಿತೆ ಮತ್ತು ಸಮಸ್ಯೆಗಳು ಇವೆ ಎನ್ನುವ ಪರಿಕಲ್ಪನೆ ಮೂಡಿದೆ. ಇತ್ತೀಚಿಗೆ ಸಮುದಾಯಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಇಂತಹ ಸಮುದಾಯಗಳಲ್ಲಿ ಟೋಕ್ರೆಕೋಲಿ ಸಮುದಾಯವು ಒಂದು. ಟೋಕ್ರೆಕೋಲಿ, ಮಹದೇವಕೋಲಿ, ಡೊರಕೋಲಿ ಸಮುದಾಯಗಳು ಕೋಲಿ (Koli). ಸಮುದಾಯದಿಂದ ಪ್ರತ್ಯೇಕಗೊಂಡ

[1] *ಮುಖ್ಯಸ್ಥರು ಹಾಗೂ ಸಹಾಯಕ ಪ್ರಾಧ್ಯಾಪಕರು, ಮಾನವಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–583 276, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ ಮೊ, ದೂ 9480300969*

ಉಪಪಂಗಡದಂತಹ ಸಮುದಾಯಗಳಾಗಿವೆ. ಹೀಗೆ ಪ್ರತ್ಯೇಕವಾಗಿದ್ದರೂ ಟೋಕ್ರೆಕೋಲಿ ಎಂದು ಕರೆಯುವುದು ವಾಡಿಕೆಯಾಗಿದೆ. ಟೋಕ್ರೆಕೋಲಿ ಸಮುದಾಯ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿದ್ದರೆ ಕೋಲಿ, ಮಹದೇವಕೋಲಿ ಪ್ರವರ್ಗ ಒಂದರ ಪಟ್ಟಿಯಲ್ಲಿರುವುದನ್ನು ಕಾಣಬಹುದಾಗಿದೆ.

**ಸಮುದಾಯದ ಹಿನ್ನೆಲೆ**

ಕೋಲಿ ಸಮುದಾಯದ ಐತಿಹಾಸಿಕ ಹಿನ್ನೆಲೆಯನ್ನು ತಿಳಿಸುವ ಅನೇಕ ಕುಲಮೂಲ ಕಥನಗಳು, ದೈವಮೂಲ ಕಥನಗಳು, ವೃತ್ತಿಮೂಲ ಕಥನಗಳು ಮತ್ತು ವಲಸೆ ಕಥನಗಳು ಸಿಗುತ್ತವೆ. ಇವುಗಳಲ್ಲಿ ಸ್ವತಃ ಸಮುದಾಯವೇ ಕಟ್ಟಿಕೊಂಡಿರುವ ಕಥನಗಳು ಮತ್ತು ಈ ಸಮುದಾಯದ ಬಗ್ಗೆ ಅನ್ಯಸಮುದಾಯಗಳು ಕಟ್ಟಿರುವ ಕಥನಗಳು ಇವೆ. ಈ ಜಗತ್ತು ಮೊದಲು ನೀರೇ ನೀರಾಗಿತ್ತು. ಆ ನೀರಿನ ಮೇಲೆ ಶಿವನು ಮಾತ್ರ ದೋಣಿಯಲ್ಲಿ ತಿರುಗಾಡುತ್ತಿದ್ದ. ಕಾಲಾನಂತರ ಆ ನೀರು ಸುತ್ತಲೂ ಹೆಪ್ಪುಗಟ್ಟಿತು. ಆ ಹೆಪ್ಪುಗಟ್ಟಿದ ಸ್ಥಳವೇ ಈ ಭೂಮಿ. ನಂತರ ಅನಂತಜೀವಿಗಳು ಸೃಷ್ಟಿಯಾದವು. ಅವುಗಳಲ್ಲಿ ಮನುಷ್ಯ ಜೀವಿಯೂ ಒಂದು. ನೀರಿನಲ್ಲಿದ್ದ ಮನುಷ್ಯರನ್ನು ನೋಡಿದ ಶಿವ ಹೆಪ್ಪುಗಟ್ಟಿದ ಭೂಮಿಯ ಮೇಲೆ ತಂದು ಬಿಡುವುದಕ್ಕೆ ಆರಂಭಿಸಿದ. ಸ್ವಲ್ಪ ದಿನಗಳ ನಂತರ ಶಿವನ ಕಾಯಕದಲ್ಲಿ ಇನ್ನಷ್ಟು ಜನ ನೆರವಾದರು. ಅಂದರೆ ಕೆಲವರು ನೆಲದ ಮೇಲೆ ಉಳಿದ ಜನ ತಮಗೆ ಅನುಕೂಲವಾದ ಸ್ಥಳವನ್ನು ಆಯ್ಕೆ ಮಾಡಿಕೊಂಡು ಜೀವಿಸತೊಡಗಿದರು. ಇನ್ನು ಕೆಲವರು ಶಿವನೊಂದಿಗೆ ಉಳಿದು ನೀರಿನ ದಡಗಳಲ್ಲಿಯೇ ಉಳಿದು ಜಲಚರಗಳನ್ನು ತಮ್ಮ ಆಹಾರವನ್ನಾಗಿಸಿಕೊಂಡು ಬದುಕಲು ಆರಂಭಿಸಿದರು. ಈ ಸಮುದಾಯವೇ ಮುಂದೆ ಅಂಬಿಗ(ಟೋಕ್ರೆ) ಕೋಲಿ(ಕೋಳಿ) ಗಂಗಾಮತಸ್ಥರೆಂದು ಪ್ರಸಿದ್ಧಿಗೆ ಬಂದಿತು.

ಪ್ರತಿಯೊಂದು ಸಮುದಾಯದ ಕುಲಮೂಲ ಕಥನಗಳು ಈ ಲೋಕದ ಸೃಷ್ಟಿ ತಮ್ಮಿಂದಲೇ ಆಯ್ತು ಎಂದು ಪ್ರತಿಪಾದನೆ ಮಾಡುವುದಕ್ಕೆ ಹಂಬಲಿಸುತ್ತವೆ. ಟೋಕ್ರೆಕೋಲಿಯ ಕುಲಮೂಲ ಕಥನಗಳು ಇದಕ್ಕೆ ಹೊರತಾಗಿಲ್ಲ. ಆದರೆ ಈ ಕಥನಗಳಲ್ಲಿ ತಮ್ಮನ್ನು ಗಂಗಾಮತಸ್ಥರೆಂದು, ಶಿವನ ವರಪುತ್ರರೆಂದು, ಜನರ ರಕ್ಷಣೆಯೇ ನಮ್ಮ ಕಾಯಕವೆಂದು ಹೇಳುವ ಅಂಶಗಳು ಗಮನಸೆಳೆಯುತ್ತವೆ. ಇದರಿಂದ ಕೋಲಿ ಸಮುದಾಯ 'ಜಲಮೂಲ ಸಂಸ್ಕೃತಿ' ಮತ್ತು 'ಶೈವಮೂಲ ಸಂಸ್ಕೃತಿ'ಯವರೆಂಬುದು ತಿಳಿದುಬರುತ್ತದೆ. ಅಧ್ಯಯನಕಾರರು ಭಾರತದ 'ಕೋಲಿ'ಗಳನ್ನು ಕುರಿತು ಮಾತನಾಡುವಾಗ 'ವಲಸೆ ಮೂಲ ದ್ರಾವಿಡಿಯನ್ ಶೈವಸಂಸ್ಕೃತಿ'ಯವರೆಂದು ಗುರುತಿಸುತ್ತಾರೆ.

ಇವರು ಭಾರತಕ್ಕೆ ವಲಸೆ ಬಂದ ಮಾರ್ಗದ ಬಗ್ಗೆ ಮತ್ತು ಭಾರತದ ತುಂಬಾ ವಿಸ್ತರಣೆಯಾದ ವಿಧಾನದ ಬಗ್ಗೆ ಅನೇಕ ಅಧ್ಯಯನಗಳಾಗಿವೆ. ಅವುಗಳಲ್ಲಿನ ಕೆಲವು ವಿವರಗಳು ಹೀಗಿವೆ.* Linguistic Survey of India: ಕೋಲಿ ಸಮುದಾಯದ ಮೂಲ ಆಸ್ಟ್ರೇಲಿಯಾ. ಇವರು ಆಫ್ರಿಕಾ ಮೂಲದವರು. ଖଠଣଣ୍ଣ ଇଛିଣ ଯିଚିದಿಂದ ಆಸ್ಟ್ರೇಲಿಯಕ್ಕೆ ಬಂದವರು. ಮುಂಡಾ, ಸಂತಾಲ, ಗೊಂಡಾ ಸಮುದಾಯಗಳಂತೆ ಹೊಟ್ಟೆಪಾಡಿಗಾಗಿ ಭಾರತಕ್ಕೆ ವಲಸೆ ಬಂದವರು. ಡಾ. ಸ್ಟೇನ್ ಕೋನಾವರ್ (Sten Konavr) ಕೋಲ್ ಜನಾಂಗ ಆಸ್ಟ್ರೇಲಿಯಾದಿಂದ ಭಾರತಕ್ಕೆ ವಲಸೆ ಬಂದು ತಮ್ಮ ಅಸ್ತಿತ್ವವನ್ನು

ಕಟ್ಟಿಕೊಂಡಿರುವ ವಿಧಾನವನ್ನು ಸೈದ್ಧಾಂತಿಕವಾಗಿ ವಿಶ್ಲೇಷಿಸಿದ್ದಾರೆ. “ಕೋಲ್ ಮತ್ತು ಮುಂಡರು ಭಾರತದ ಆದಿಮ ಜನಾಂಗದವರು. ಕೋಲರು ಸಾವಿರಾರು ವರ್ಷಗಳ ಪೂರ್ವದಲ್ಲಿ ದಕ್ಷಿಣ ಹಾಗೂ ಉತ್ತರ ಭಾರತದಲ್ಲಿ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದರು. ಇವರ ಭಾಷೆ ಆಸ್ಟ್ರೋ ಏಷಿಯಾಟಿಕ್ ಆಗಿತ್ತು. ಈಗಲೂ ಮಧ್ಯ ಭಾರತದ ಪೂರ್ವ ಭಾಗದಲ್ಲಿ ಆಸ್ಟ್ರೋ ಏಷಿಯಾಟಿಕ್ ಭಾಷೆಯನ್ನು ಮಾತನಾಡುತ್ತಾರೆ. ಆರ್ಯ ಮತ್ತು ಮುಂಡ, ಕೋಲ್ ಭಾಷೆಗಳಲ್ಲಿ ಕೊಡುಕೊಳ್ಳುವಿಕೆ ಇದೆ. ಕದಲಿ(ಕೇಲಾ), ಕಪಾಸ(ಹತ್ತಿ), ಪಾನ(ಎಲೆ), ಬಾಲ್(ಕೇಶ್), ಶಾಲಮಲೀ(ರೇಷ್ಮೆ ಬಟ್ಟೆ) ಇಂತಹ ಅನೇಕ ಭಾಷೆಗಳು ‘ಕೋಲ್ ಭಾಷೆ’ಯಿಂದ ‘ಆರ್ಯ ಭಾಷೆ’ಗೆ ಬಂದಿವೆ” ಎನ್ನುತ್ತಾರೆ. (ಕನ್ಹೆಯಾಲಾಲ್, ಚಂಚರಿಕ್, 1995, ಪುಟ 35).

ಕೋಲರು ಆರ್ಯರ ಆಗಮನಕ್ಕಿಂತ ಪೂರ್ವದಲ್ಲಿ ಭಾರತಕ್ಕೆ ಬಂದವರೆನ್ನುವುದು ಇವರ ವಾದ. ಶಂಬಾ ಅವರ ವಾದವು ಇದೆ ಆಗಿದೆ. ಶಂಬಾ ಅವರು ಈ ವಿವರ ನೀಡುವುದರ ಜೊತೆಗೆ ಕೋಲಿಗಳು ಕರ್ನಾಟಕದಲ್ಲಿ ಕಟ್ಟಿಕೊಂಡಿರುವ ಅಸ್ಮಿತೆಯನ್ನು ಇಲ್ಲಿನ ಸ್ಥಳನಾಮಗಳಿಂದ ಗುರುತಿಸಿದ್ದಾರೆ. ಇದು ಕೋಲ ಸಮುದಾಯದ ಸಾಂಸ್ಕೃತಿಕ ಚರಿತ್ರೆಯನ್ನು ಅರಿಯುವುದಕ್ಕೆ ಸಹಾಯಕವಾಗುತ್ತದೆ. “ಕೋಲರು ಮತ್ತು ಮುಂಡರ ಹರಿವಿನ ಎಡೆಗಳು ಕನ್ನಡ ನಾಡಿನಲ್ಲಿ ವಿಶೇಷವಾಗಿವೆ. ಕೊಲ್ಲೂರು, ಕೋಲಾರ, ಕೊಲ್ಲಗಿರಿ, ಕೊಲ್ಲಾಪುರ, ಕೊಲ್ಲಿಪಾಕಿ ಮುಂತಾದ ಸ್ಥಳಗಳು ಕೋಲ ಜನಸಮುದಾಯದ ಕುರುಹುಗಳು. ಕೊಳ್ಳೂರು, ಕೋಳೂರು, ಕೊಳಾರ ಈ ಹೆಸರಿನ ಗ್ರಾಮಗಳು ಕರ್ನಾಟಕದಲ್ಲಿ ಹಾಗೂ ಬೀದರ್ ಜಿಲ್ಲೆಯಲ್ಲಿವೆ. ಹೀಗಾಗಿ ಬೀದರ್ ಮೂಲ ನಿವಾಸಿಗಳಲ್ಲಿ ‘ಟೋಕ್ರೆಕೋಲಿ’ಗಳು ಸೇರುವರು. ಬೇಡರು, ಬಿಲ್ಲವರೂ ಅಂಬಿಗರು ಇವರು ಕನ್ನಡ ನಾಡಿನ ಮೂಲ ನಿವಾಸಿಗಳು ಕೋಲ ಎಂದು ಕರೆಯುವರು. ಮುಂಬೈ ಕರಾವಳಿಯಲ್ಲಿ ಕೋಲಿಗಳೆಂಬ ಜನವಿದೆ. ಇವರು ಕೋಲ್ ಜನ ಇದ್ದಿರಲೂ ಸಾಧ್ಯವಿದೆ” (ಶಂಬಾ ಜೋಶಿ, ಕರ್ನಾಟಕ ಕನ್ನಡ ಸಂಸ್ಕೃತಿ, ಪುಟ 97–98).

ಕೋಲಿಗಳು ಭಾಷಾವಾರು ಪ್ರಾಂತಗಳ ವಿಂಗಡಣೆ ಮತ್ತು ಕರ್ನಾಟಕ ಏಕೀಕರಣದಿಂದಾಗಿ ವಿಂಗಡಣೆಗೊಂಡು ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಲ್ಲಿ ಉಳಿದುಕೊಂಡರು ಎನ್ನುವ ಅಭಿಪ್ರಾಯವು ಇದೆ. “1956ರಲ್ಲಿ ಭಾಷಾವಾರು ಪ್ರಾಂತ ವಿಂಗಡಣೆ ಮತ್ತು ಕರ್ನಾಟಕ ಏಕೀಕರಣದಿಂದಾಗಿ ಈ ಜನ ಮರಾಠಿ, ತೆಲುಗು, ತಮಿಳು, ಮಲಯಾಳಂ, ಕೊಂಕಣಿ, ತುಳು ಭಾಷೆಗಳನ್ನಾಡುವ ಜನ ಹಳೆಮೈಸೂರು ಕನ್ನಡ ಭಾಗಗಳಿಂದ ಬಂದು ಒಂದೇ ರಾಜ್ಯಕ್ಕೆ ಸೇರಿದರು. ಏಕೀಕರಣಕ್ಕೆ ಮುಂಚೆ ಈ ಸಮುದಾಯಕ್ಕೆ ಆಯಾ ಭಾಗಗಳಲ್ಲಿ ವಿವಿಧ ಹೆಸರುಗಳಿಂದ ಕರೆಯುತ್ತಿದ್ದರು. ಅದರಂತೆ ಆಯಾ ಸಮುದಾಯದ ರೀತಿ ನೀತಿಗಳು ನಡಾವಳಿಗಳು ಸಹ ಭಿನ್ನವಾಗಿದ್ದವು” (ಎಚ್.ಜೆ. ಲಕ್ಕಪ್ಪಗೌಡ ಪ್ರ.ಸಂ. ಕರ್ನಾಟಕ ಬುಡಕಟ್ಟುಗಳು, ಸಂ. 2, ಪು. 328) ಎನ್ನುವ ಅಭಿಪ್ರಾಯ ಸರಿಯಾಗಿದೆ. ಭಾಷಿಕವಾಗಿ ರಾಜ್ಯಗಳು ವಿಂಗಡಣೆಯಾದ ನಂತರ ಭಾಷಾ ಪರಿಕಲ್ಪನೆಯಲ್ಲಿ ಆಡಳಿತಾತ್ಮಕವಾಗಿ ಪ್ರದೇಶದ ಮಿತಿಗೆ ಒಳಪಟ್ಟವು. ಆಯಾ ಭಾಷಿಕ ರಾಜ್ಯದ ನಿಯಮಗಳಿಗೆ ತಕ್ಕಂತೆ ಆಡಳಿತಾತ್ಮಕವಾಗಿ ಭಿನ್ನವಾದ ಅನನ್ಯತೆಯನ್ನು ಕಟ್ಟಿಕೊಂಡವು ಮತ್ತು ಹೊತ್ತುಕೊಂಡವು. ಇದನ್ನು ಕೇವಲ ಆಡಳಿತಾತ್ಮಕ ವಿಂಗಡಣೆಗಾಗಿ ಮಾತ್ರ ಸ್ವೀಕರಿಸಿಕೊಂಡವೇ ಹೊರತು ಸಾಂಸ್ಕೃತಿಕ ಸಂಬಂಧಕ್ಕೆ ಆದಿವಾಸಿ ಸಮುದಾಯಗಳು ಹೆಚ್ಚು ಅನ್ವಯ ಮಾಡಿಕೊಳ್ಳಲಿಲ್ಲ. ತಮ್ಮ ತಮ್ಮ ಮೂಲ ನೆಲೆಯಲ್ಲಿದ್ದ ಸಾಂಸ್ಕೃತಿಕ ಸಂಬಂಧವನ್ನು ಮುಂದುವರೆಸಿದೆವು. ಆದರೂ ಸಮುದಾಯಗಳ, ವಿಶೇಷವಾಗಿ ಅಲೆಮಾರಿ

ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
IIMRD JOURNALS

ಆದಿವಾಸಿ ಸಮುದಾಯಗಳ ಸಾಂಸ್ಕೃತಿಕ ಅಸ್ಮಿತೆಗಳ ವಿಸ್ಮೃತಿಗೆ ಕಾರಣವಾಯಿತು. ಈ ಪರಿಣಾಮಕ್ಕೆ ಕರ್ನಾಟಕದ ಹಲವು ಸಮುದಾಯಗಳು ಒಳಗಾದವು. ಅವುಗಳಲ್ಲಿ 'ಕೋಲಿ' ಸಮುದಾಯವು ಒಂದು.

ಟೋಕ್ರೆಕೋಲಿಗಳು ಮೂಲತಃ ಅಲೆಮಾರಿಗಳು. ಜಲಕೇಂದ್ರಿತ ವೃತ್ತಿಗಾರರು. ಹಾಗಾಗಿ ಹಳ್ಳ, ಕೆರೆ, ನದಿಗಳ ದಡಗಳಲ್ಲಿ ಮೀನುಗಾರಿಕೆ ಮತ್ತು ಅಂಬಿಗತನ ಮಾಡುತ್ತಾ ಅಲೆಯುತ್ತಿದ್ದರು. ಇವರ ಅಲೆಮಾರಿತನ ಉಳಿದ ಅಲೆಮಾರಿ ಸಮುದಾಯಗಳಿಗಿಂತ ಭಿನ್ನವಾಗಿತ್ತು. ಗುಂಪು ಅಲೆಮಾರಿತನದ ಬದಲಾಗಿ ಒಂದು – ಎರಡು ಕುಟುಂಬಗಳು ಸೇರಿ ಅಲೆಮಾರಿತನ ಮಾಡಿರುವುದೇ ಹೆಚ್ಚು. ಏಕೆಂದರೆ ಟೋಕ್ರೆಕೋಲಿಗಳು ಸಣ್ಣ ಸಣ್ಣ ಪ್ರಮಾಣದಲ್ಲಿ ನಿಲ್ಲುವ ನೀರಿನ ಪ್ರದೇಶವನ್ನು ಆಧಾರವಾಗಿಟ್ಟುಕೊಂಡು ವೃತ್ತಿ ಮಾಡುತ್ತಿದ್ದರು. ಅಲ್ಲಿ ಸಿಗುವ ಸಂಪನ್ಮೂಲಕ್ಕೆ ತಕ್ಕಂತೆ ಗುಂಪುಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಈಗಲೂ ಹೆಚ್ಚು ಗ್ರಾಮಗಳಲ್ಲಿ ಒಂದು ಅಥವಾ ಎರಡು ಮನೆತನಕ್ಕೆ ಸೇರಿದ ಕುಟುಂಬಗಳು ಹೆಚ್ಚಾಗಿ ಸಿಗುತ್ತವೆ.

ಇವರು ಕರ್ನಾಟಕದಲ್ಲಿ ಬಾಗಲಕೋಟೆ, ಬೆಳಗಾವಿ, ಬಿಜಾಪುರ, ಬೀದರ್, ಧಾರವಾಡ ಮತ್ತು ಕಾರವಾರ ಜಿಲ್ಲೆಗಳಲ್ಲಿ ನೆಲೆಸಿದ್ದಾರೆ. ಇವರು ಕರ್ನಾಟಕ–ಮಹಾರಾಷ್ಟ್ರ ಗಡಿನಾಡು ತಾಲೂಕುಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇವರು ತಮ್ಮನ್ನು ಮಹಾರಾಷ್ಟ್ರ ಮೂಲದವರೆಂದು ಕರೆದುಕೊಳ್ಳುತ್ತಾರೆ. ಪ್ರಸ್ತುತ ಸಂದರ್ಭದಲ್ಲಿ ಬೀದರ್, ಬೆಳಗಾವಿ ಹಾಗೂ ಬಿಜಾಪುರ ಜಿಲ್ಲೆಯಲ್ಲಿ ಹೆಚ್ಚು ಜನಸಂಖ್ಯೆ ಇದೆ. ರಾಜಕೀಯವಾಗಿ, ಸಾಮಾಜಿಕವಾಗಿ, ಆಡಳಿತಾತ್ಮಕವಾಗಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾದ ಸ್ಥಾನಮಾನಗಳನ್ನು ಇವರು ಹೊಂದಿದ್ದಾರೆ.

ಈ ಸಮುದಾಯದ ಕೆಲವು ಮನೆತನಗಳು ಹಿಂದೆ 'ತಳವಾರಿಕೆ' ವೃತ್ತಿಯನ್ನು ಮಾಡುತ್ತಿದ್ದವು. ಅಂಥವರನ್ನು ಗ್ರಾಮಸ್ಥರು 'ನಾಯಕ'ನೆಂದು ಪರಿಗಣಿಸಿದ್ದಾರೆ. ಗ್ರಾಮದ ಒಳಗಡೆ ನೆಲೆಸುವುದಕ್ಕೆ ಅವಕಾಶ ಕಲ್ಪಿಸಿದ್ದಾರೆ. ಮಹಾದೇವ ಬೆಟ್ಟದಲ್ಲಿ ವಾಸಿಸುವ ಟೋಕ್ರೆಕೋಲಿಗಳನ್ನು 'ಮಹಾದೇವ'ಕೋಲಿಗಳೆಂದು ಕರೆಯಲಾಗುತ್ತದೆ. ಕೊಲ್ಲಾಪುರದಿಂದ ಬೆಳಗಾವಿ ಜಿಲ್ಲೆಯ ಸವದತ್ತಿಯಿಂದ ಧಾರವಾಡ ಜಿಲ್ಲೆ ಗಜೇಂದ್ರಗಡದವರಗೂ'ಅ 1ಟ ಹಾಗೂ ಬಿಜಾಪುರ ಜಿಲ್ಲೆಯ ಆಲಮಟ್ಟಿ, ತಾಳಿಕೋಟೆ, ಬಾದಾಮಿ ಪ್ರದೇಶದವರೆಗೆ ಪಸರಿಸಿರುವ ಬೆಟ್ಟವನ್ನು ಮಹಾದೇವ ಬೆಟ್ಟವೆಂದು ಕರೆಯಲಾಗುತ್ತದೆ. ಇವರನ್ನು ಹಾವನೂರು ವರದಿ, ಚಿನ್ನಪ್ಪರೆಡ್ಡಿ ಹಿಂದುಳಿದ ವರ್ಗದ ಆಯೋಗ ಹೀಗೆ ಬೇರೆ ಬೇರೆ ಆಯೋಗಗಳು ಬೇರೆ ಬೇರೆ ನೆಲೆಯಲ್ಲಿ ಗ್ರಹಿಸಿವೆ.

**ವಸತಿ ಪದ್ಧತಿ**

ಸಮುದಾಯದ ವಸತಿಯನ್ನು ಕುರಿತು ಅಧ್ಯಯನ ಮಾಡುವುದೆಂದರೆ ಅದರ ಕೌಟುಂಬಿಕ ರಚನೆಯನ್ನು ಮತ್ತು ಇತರ ಸಮುದಾಯಗಳೊಂದಿಗೆ ಇರುವ ಸಾಮಾಜಿಕ ಸಂಬಂಧಗಳನ್ನು ಅಧ್ಯಯನ ಮಾಡಿದಂತೆ. ಟೋಕ್ರೆಕೋಲಿಗಳು ಕೆಲವು ವರ್ಷಗಳ ಹಿಂದೆ ಹಳ್ಳ, ಹೊಳೆ, ಕೆರೆ, ನದಿ, ಉಪನದಿ ಮತ್ತು ಸಮುದ್ರಗಳ ದಡಗಳಲ್ಲಿ ನೆಲೆಸುತ್ತಿದ್ದರು. ಇದಕ್ಕಾಗಿ ಸಣ್ಣ ಸಣ್ಣ ಗುಡಿಸಲುಗಳನ್ನು ಇಲ್ಲವೆ ಮೀನುಗಾರಿಕೆ ಮತ್ತು ಅಂಬಿಗತನಕ್ಕೆ ಬಳಸಿದ್ದ ಹಳೆಯ ದೋಣಿ ಅಥವಾ ಬುಟ್ಟಿಗಳನ್ನು ಬಾರಲಾಗಿ ಬಳಸಿ ಮನೆಗಳನ್ನಾಗಿ ಮಾಡಿಕೊಳ್ಳುತ್ತಿದ್ದರು. 'ವಿಭಕ್ತ ಕುಟುಂಬ' ಪದ್ಧತಿ ಹೆಚ್ಚು ಬಳಕೆಯಲ್ಲಿತ್ತು. ಆ ಕಾರಣದಿಂದ ಚಿಕ್ಕ ಚಿಕ್ಕ

ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
IIMRD JOURNALS

ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಇಷ್ಟಪಡುತ್ತಿದ್ದರು. ಮೀನುಗಾರಿಕೆ ಪ್ರಧಾನ ವೃತ್ತಿಯಾದ ನಂತರ ಅವಿಭಕ್ತ ಕುಟುಂಬ ಪದ್ಧತಿ ಮಾನ್ಯತೆ ಕಳೆದುಕೊಂಡಿತು. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗಬೇಕಾದ ಅನಿವಾರ್ಯತೆ ಮತ್ತು ಪ್ರಕೃತಿ ವಿಕೋಪಗಳಿಂದ ಸ್ಥಳವನ್ನು ಬದಲಾಯಿಸಲೇಬೇಕಾದ ಅನಿವಾರ್ಯತೆಯಿದ್ದ ಕಾರಣ ಈ ತರದ ರಚನೆಯನ್ನು ಇಷ್ಟಪಡುತ್ತಿದ್ದರು. ಹಾಗಾಗಿ ವೃತ್ತಿಯ ವೈಧಾನಿಕತೆಯೇ ಚಿಕ್ಕ ಚಿಕ್ಕ ಗುಡಿಸಲು ಮನೆಗಳನ್ನು ಕಟ್ಟಿಕೊಳ್ಳುವಂತೆ ರೂಪಿಸಿದೆ ಎನ್ನಬಹುದು.

ಇವತ್ತು ಇದರ ಸ್ವರೂಪ ಬೇರೆಯಾಗಿದೆ. ಅಂದರೆ ಟೋಕ್ರೆಕೋಲಿಗಳು ಸಣ್ಣ ಸಣ್ಣ ಪ್ರಮಾಣದಲ್ಲಿ ನಿಲ್ಲುವ ನೀರಿನ ಸ್ಥಳವನ್ನು ಆಧರಿಸಿ ವೃತ್ತಿ ಮಾಡುತ್ತಿದ್ದವರು. ಈಗ ಈ ವೃತ್ತಿಯ ಮೇಲೆ ಅನೇಕ ಪರಿಣಾಮಗಳಾಗಿವೆ. "ಮಳೆಯ ಅಭಾವದಿಂದ ಗುಂಡಿಗಳಲ್ಲಿ, ಕೆರೆಗಳಲ್ಲಿ ನೀರು ನಿಲ್ಲುತ್ತಿಲ್ಲ. ಕೆಲವು ಕೆರೆಗಳಲ್ಲಿ ರೈತರು ಮೀನುಗಾರಿಕೆಗೆ ಅವಕಾಶ ಕೊಡುತ್ತಿಲ್ಲ. ಮೀನುಗಾರಿಕೆ ಮಾಡಬೇಕೆಂದರೆ ಆ ಕೆರೆಗಳು ಆಡಳಿತಕ್ಕೆ ಒಳಪಟ್ಟ ಗ್ರಾಮ, ಪಟ್ಟಣ, ನಗರ ಪಂಚಾಯಿತಿಗಳಿಂದ ಅನುಮತಿ ಪಡೆಯಬೇಕು. ಇನ್ನೂ ಕೆಲವು ಕಡೆ ಹರಾಜು ಹಾಕುವ ಪದ್ಧತಿ ಆರಂಭವಾಗಿದೆ. ಟೋಕ್ರೆಕೋಲಿಗಳು ಅಷ್ಟೊಂದು ಹಣವನ್ನು ಪಾವತಿಸಿ ಗುತ್ತಿಗೆ ಹಿಡಿಯುವಷ್ಟು ಶ್ರೀಮಂತರಲ್ಲ. ಮೀನುಗಾರರೆಲ್ಲ ಒಂದಾಗಿ ಗುತ್ತಿಗೆ (ಕಾಂಟ್ರ್ಯಾಕ್ಟ್) ಹಿಡಿಯಲು ಮುಂದಾದರೆ ಸ್ಥಳೀಯ ರಾಜಕೀಯ ನಾಯಕರು ಇದಕ್ಕೆ ಅವಕಾಶ ಕೊಡುವುದಿಲ್ಲ. ಮೀನುಗಾರರಿಗೆ ಗುತ್ತಿಗೆ ಕೊಡಬೇಕೆನ್ನುವ ನಿಯಮವಿದ್ದರೂ ಇದನ್ನು ಪಾಲಿಸುವುದಿಲ್ಲ. ಮತ್ತೆ ಕೆಲವು ಕಡೆ ಯಾವುದೋ ಬಡ ಮೀನುಗಾರನ ಜಾತಿ ಪ್ರಮಾಣ ಪತ್ರದ ಅಡಿಯಲ್ಲಿ ರಾಜಕೀಯ ನಾಯಕರೇ ಗುತ್ತಿಗೆ ತೆಗೆದುಕೊಳ್ಳುತ್ತಿದ್ದಾರೆ.

**ಒಳಾಡಳಿತ ಪದ್ಧತಿ**

ಹಿಂದೆ ಮಹಿಳೆಯೇ ಮನೆಯ ಯಜಮಾನಗಳಾಗಿರುತ್ತಿದ್ದಳು. ಈ ಪದ್ಧತಿ ಹಳ್ಳಿಗಳ ಕೆಲವು ಮನೆಗಳಲ್ಲಿ ಈಗಲೂ ಪ್ರಚಲಿತದಲ್ಲಿದೆ, ಆದರೆ ತುಂಬಾ ಕಡಿಮೆ. ಪುರುಷ ಮನೆಯ ಯಜಮಾನನಾಗುತ್ತಿದ್ದಾನೆ. ಟೋಕ್ರೆಕೋಲಿಗಳು ಇದನ್ನು ಇತ್ತೀಚಿಗೆ ಬಳಕೆಗೆ ಬಂದ ಪದ್ಧತಿ ಎಂದು ಹೇಳುತ್ತಾರೆ. "ನಮ್ಮಲ್ಲಿ ಅಮ್ಮಂದಿರೇ ಮನೆಯ ಯಜಮಾನರು. ನಾವೆಲ್ಲ ಅಮ್ಮನ ಮನೆಯಲ್ಲಿಯೇ ಬೆಳೆದವರು. ಅಪ್ಪನ ಮನೆ, ಬೀಗರ ಮನೆ ಇದ್ದಂತಿತ್ತು. ಅತಿಥಿಗಳಂತೆ ಆಗಾಗ ಹೋಗಿ ಬರುತ್ತಿದ್ದೆವು. ಈಗಿನ ಮಕ್ಕಳಿಗೆ ಈ ಅನುಭವ ಇಲ್ಲ. ಈಗ ನಮ್ಮ ಎಲ್ಲಾ ಮನೆಗಳಲ್ಲೂ ಅಪ್ಪ, ಅಣ್ಣ, ತಮ್ಮಂದಿರು ಯಜಮಾನರಾಗಿದ್ದಾರೆ. 'ಕನ್ಯಾ' ನೋಡಿ ಮದುವೆ ಆಗುತ್ತಾರೆ. ಹೆಂಡತಿಯನ್ನು ಮನೆಗೆ ಕರೆತರುತ್ತಾರೆ. ಹಿಂದೆ ಹೆಂಡತಿಯಾದವಳು ಗಂಡನ ಮನೆಗೆ ಬರುತ್ತಿರಲಿಲ್ಲ. ತವರು ಮನೆಯಲ್ಲಿಯೇ ಉಳಿಯುತ್ತಿದ್ದಳು. ಅಪ್ಪ ದಿನಾಲು ತಮ್ಮ ಮನೆಯಿಂದ ಅಮ್ಮನ ಮನೆಗೆ ಓಡಾಡುತ್ತಿದ್ದ. ಹಾಗಾಗಿ ಮನೆಯ ಯಜಮಾನಿಕೆ ಅಮ್ಮನಿಗೆ ಇರುತ್ತಿತ್ತು" (ಶಿವಮ್ಮ ಟೋಕ್ರೆಕೋಲಿ, ಬೀದರ್, ವ: 68). ಇವರು ಏಕಪತಿತ್ವ ಮತ್ತು ಏಕಪತ್ನಿತ್ವ ಪದ್ಧತಿಯನ್ನು ಹೆಚ್ಚಾಗಿ ಪಾಲಿಸುತ್ತಾರೆ. ಗೌಣವಾಗಿ ಬಹುಪತ್ನಿತ್ವವೂ ರೂಢಿಯಲ್ಲಿದೆ. ಬಹುಪತಿತ್ವ ಪದ್ಧತಿ ಕಂಡುಬರುತ್ತಿಲ್ಲ. ವಿವಾಹ ವಿಚ್ಛೇದನಗಳು ಬಹಳ ಸರಳವಾಗಿ ನಡೆಯುತ್ತವೆ. ಇಲ್ಲಿ ಮಹಿಳೆಗೆ ಅವಕಾಶ ಹೆಚ್ಚು. ವಿಧವಾ ವಿವಾಹ ಪದ್ಧತಿಯು ಬಳಕೆಯಲ್ಲಿದೆ. ಹಿಂದೆ ಬಹುಪತ್ನಿತ್ವ ಹೊಂದಿದವರಿಗೆ ಶಿಕ್ಷೆ ಕೊಡಲಾಗುತ್ತಿತ್ತು. ಕೆಲವು ಕಡೆ ಮನೆಯ ಯಜಮಾನಿ ಅಂದರೆ ಹೆಂಡತಿ ತನ್ನ ಮನೆಯ ಪ್ರವೇಶವನ್ನು ನಿಷೇಧಗೊಳಿಸುತ್ತಿದ್ದಳು. ಇದಕ್ಕೆ ಸಮುದಾಯದ ಮನ್ನಣೆಯೂ ಇತ್ತು.

ವೈವಾಹಿಕ ಸಂಬಂಧಗಳು ರಕ್ತಸಂಬಂಧದಲ್ಲಿ ಅಥವಾ ಹತ್ತಿರದ ಮನೆಗಳಲ್ಲಿ, ಊರುಗಳಲ್ಲಿ ಹೆಚ್ಚಾಗಿ ನಡೆಯುತ್ತವೆ. ಬಹು ದೂರದ ಅಥವಾ ಅಪರಿಚಿತ ಹೆಣ್ಣನ್ನು ತರುವುದು ಕಡಿಮೆ. ಮಾತೃಪ್ರಧಾನ ಸಂಸ್ಕೃತಿಯೇ ಇದಕ್ಕೆ ಕಾರಣ. ಅಂದರೆ ಪುರುಷನು ಪ್ರತಿದಿನ ಹೆಂಡತಿಯ ಮನೆಗೆ ಹೋಗಿ ಮತ್ತೆ ತನ್ನ ಮನೆಗೆ ಮರಳಿ ಬರುವುದಕ್ಕೆ ಅನುಕೂಲ ಆಗಬೇಕೆಂದು ಹತ್ತಿರದ ವೈವಾಹಿಕ ಸಂಬಂಧವನ್ನು ರೂಢಿಸಿಕೊಂಡಿದ್ದಾರೆ. ವಾಹನಗಳು ಇಲ್ಲದ ಆ ಕಾಲದಲ್ಲಿ ಈ ಪದ್ಧತಿ ಅನಿವಾರ್ಯವಾಗಿತ್ತು. ಈಗ ಕಡಿಮೆಯಾಗಿದೆ. ಭಟ್ಕಳ ಮತ್ತು ಕಾರವಾರ ಜಿಲ್ಲೆಯ ಅಂಬಿಗರಲ್ಲಿ ಈ ಪದ್ಧತಿ ಹೆಚ್ಚಾಗಿ ಪ್ರಚಲಿತದಲ್ಲಿದೆ. ಟೋಕ್ರೆಕೋಲಿಗಳು ದೂರದ ಊರುಗಳಿಂದ ಮತ್ತು ಹೊರ ರಾಜ್ಯಗಳಿಂದ ಹೆಣ್ಣನ್ನು ತರುತ್ತಿದ್ದಾರೆ. ಈಗ ದೂರದ ಊರುಗಳಿಂದ ಹೆಣ್ಣು ತರುವುದು ಪ್ರತಿಷ್ಠೆ ಎಂದುಕೊಳ್ಳುತ್ತಿದ್ದಾರೆ. ಹಾಗಾಗಿ ಮಾತೃಪ್ರಧಾನ ಸಂಸ್ಕೃತಿ ಕಣ್ಮರೆಯಾಗುತ್ತಿದೆ. ಪುರುಷಪ್ರಧಾನ ಸಂಸ್ಕೃತಿ ಗಟ್ಟಿಯಾಗುತ್ತಿದೆ.

**ಆಹಾರ ಪದ್ಧತಿ**

ಇವರು ಮಾಂಸ ಮತ್ತು ಸಸ್ಯಾಹಾರಗಳೆರಡನ್ನು ಬಳಸುತ್ತಾರೆ. ಮಾಂಸಾಹಾರಕ್ಕೆ ಮೀನು, ಕೋಳಿ ಮತ್ತು ಕುರಿಯನ್ನು ಹೆಚ್ಚಾಗಿ ಬಳಸುತ್ತಾರೆ. ಹಿಂದೆ ಕಾಡಿನಲ್ಲಿ ಸಿಗುವ ಪ್ರಾಣಿಗಳನ್ನು ಬೇಟೆ ಆಡಿ ಆಹಾರಕ್ಕೆ ಬಳಸಿಕೊಳ್ಳುತ್ತಿದ್ದರು. ಕ್ಷೇತ್ರಕಾರ್ಯಕ್ಕೆ ಹೋದಾಗ ಕೆಲವರ ಮನೆಯಲ್ಲಿ ಬೇಟೆಗಾಗಿ ಬಳಸುತ್ತಿದ್ದ ಸಾಮಗ್ರಿಗಳು ದೊರಕಿವೆ. ಈಗ ಬೇಟೆ ಆಡುವುದನ್ನು ಕೈಬಿಟ್ಟಿದ್ದಾರೆ. ಆದರೆ ಆಚರಣೆಯಾಗಿ ರೂಢಿಯಲ್ಲಿದೆ. ಕಾಲಕ್ಕೆ ತಕ್ಕಂತೆ ಬೇರೆ ಬೇರೆ ಪ್ರಾಣಿಗಳನ್ನು ಬೇಟೆ ಆಡುತ್ತಾರೆ. ಉದಾಹರಣೆಗೆ ಯುಗಾದಿ ದಿವಸ ಹೊಸ ವರ್ಷಕ್ಕೆ ಶುಭ ಕಾರ್ಯದಿಂದ ಆಹಾರ ಪದ್ಧತಿ ಆರಂಭವಾಗಲೆಂದು ಕಾಡಿಗೆ ಹೋಗಿ ಜಿಂಕೆ, ಮೊಲ ಅಥವಾ ಚಿಗರೆಯನ್ನು ಬೇಟೆಯಾಡಿಕೊಂಡು ತರುತ್ತಾರೆ. ಈ ಪದ್ಧತಿ ಧಾರವಾಡ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಆ ದಿನ ಬೇಟೆ ಸಿಗದಿದ್ದರೆ ವರ್ಷವಿಡೀ ಆಹಾರ ಚೆನ್ನಾಗಿ ಸಿಗುವುದಿಲ್ಲವೆಂದು ಗ್ರಹಿಸುತ್ತಾರೆ. ಕೆಲವು ಮನೆಗಳಲ್ಲಿ ಮಾಂಸ ಆಹಾರ ನಿಷೇಧವಿದೆ. "ಹನ್ನೆರಡನೆ ಶತಮಾನದಲ್ಲಿ ಶರಣರ ಚಳವಳಿಯ ಮತ್ತು ಅಂಬಿಗರ ಚೌಡಯ್ಯನ ಪ್ರಭಾವದಿಂದ ಈ ಜನ ವೀರಶೈವ ಧರ್ಮ ಸ್ವೀಕರಿಸಿ ಇಲ್ಲವೇ ಲಿಂಗ ಧರಿಸುವುದು ಆರಂಭಿಸಿದ ಮೇಲೆ ಬೆಳಗಾವಿ, ಬಿಜಾಪುರ, ಧಾರವಾಡ ಜಿಲ್ಲೆಗಳಲ್ಲಿ ಮಾಂಸಾಹಾರ ಬಿಟ್ಟು ಶಾಖಾಹಾರಿಗಳಾದರು" (ಎಚ್.ಜೆ. ಲಕ್ಕಪ್ಪಗೌಡ ಪ್ರ.ಸಂ, ಕರ್ನಾಟಕ ಬುಡಕಟ್ಟುಗಳು, ಸಂ. 2, ಪು. 334). ಆದರೆ ಪ್ರಮಾಣ ತುಂಬಾ ಕಡಿಮೆ. ಹಿಂದೆ ಬಿಟ್ಟಿದ್ದ ಕೆಲವು ಮನೆತನಗಳು ಇತ್ತೀಚೆಗೆ ಮತ್ತೆ ಮಾಂಸ ತಿನ್ನುವುದನ್ನು ಆರಂಭಿಸಿವೆ. ಮೀನುಗಾರಿಕೆ ಮಾಡುವವರು 'ಮಾಂಸ' ತಿನ್ನದಿದ್ದರೆ ಆ ವೃತ್ತಿಗೆ ಅವಮಾನ ಮಾಡಿದಂತೆ ಎನ್ನುವ ಅಭಿಪ್ರಾಯ ಇವರಲ್ಲಿದೆ.

**ಮೂಲ ವೃತ್ತಿ**

ಕೋಲಿಗಳಲ್ಲಿ ಭಾರತಕ್ಕೆ ವಲಸೆ ಬಂದ ಕಾಲದಿಂದಲೂ ಈ ತನಕ ಅನೇಕ ಬಗೆಯ ವೃತ್ತಿಪಲ್ಲಟಗಳಾಗಿವೆ. ಆರ್ಯರೊಂದಿಗೆ ನಡೆದ ಸಂಘರ್ಷ ವೃತ್ತಿಯಲ್ಲಿ ದೊಡ್ಡ ಬದಲಾವಣೆ ತಂದಿತು. ಒಟ್ಟಾಗಿ ಒಂದು ಪ್ರದೇಶದಲ್ಲಿ ನೆಲೆಸಿದ್ದ ಈ ಸಮುದಾಯ ಛಿದ್ರವಾಯಿತು. ತಮ್ಮ ಅನುಕೂಲಕ್ಕೆ ತಕ್ಕಂತೆ ದಿಕ್ಕುಗಳನ್ನು ಆಯ್ಕೆ ಮಾಡಿಕೊಂಡು ಭಾರತದ ತುಂಬಾ ಹರಡಿಕೊಂಡಿತು. ಆಗ ತಮ್ಮ ಮೂಲವೃತ್ತಿಯ

ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD

IIMRD JOURNALS

ಜೊತೆ ಆ ಪ್ರದೇಶಕ್ಕೆ ತಕ್ಕಂತೆ ಬೇರೆ ಬೇರೆ ವೃತ್ತಿಗಳನ್ನು ರೂಢಿಸಿಕೊಂಡರು. ಅಂತಹ ಗುಂಪುಗಳಲ್ಲಿ ಟೋಕ್ರೆಕೋಲಿಯೂ ಒಂದು. ಈ ಸಮುದಾಯ ಬೆಳಗಾವಿ, ಬೀದರ್, ಧಾರವಾಡ, ರಾಯಚೂರ, ಬಿಜಾಪುರ, ಧಾರವಾಡ, ಬಾಗಲಕೋಟೆ ಜಿಲ್ಲೆಗಳಲ್ಲಿ ನೆಲೆಸಿದೆ. ಪ್ರಾದೇಶಿಕತೆಗೆ ತಕ್ಕಂತೆ ಬೇರೆ ಬೇರೆ ವೃತ್ತಿಗಳನ್ನು ರೂಢಿಸಿಕೊಂಡು ಜೀವನ ಮಾಡುತ್ತಿದೆ.

ಇವರ ಮೂಲ ವೃತ್ತಿ 'ಅಂಬಿಗತನ'. ಮೀನುಗಾರಿಕೆ ನಂತರ ರೂಢಿಯಾಯಿತು. ಮೀನುಗಾರಿಕೆ ಹೆಚ್ಚು ಬಂಡವಾಳ ತರುವ ವೃತ್ತಿಯಾಗಿ ರೂಪಾಂತರಗೊಂಡ ನಂತರ ಇದನ್ನೇ ಪ್ರಧಾನವೃತ್ತಿಯನ್ನಾಗಿ ಮಾಡಿಕೊಂಡರು. ಹಾಗಾಗಿಯೇ ಇವತ್ತು ಮೀನುಗಾರಿಕೆ ಮಾಡುವ ಕುಟುಂಬಗಳು ಹೆಚ್ಚಾಗಿ ಸಿಗುತ್ತವೆ. ಜೊತೆಗೆ ಅಂಬಿಗವೃತ್ತಿ ಕಡಿಮೆ ಜನರಿಗೆ ವೃತ್ತಿಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಅವಕಾಶ ಕೊಡುತ್ತದೆ. ಹೆಚ್ಚೆಂದರೆ ಇಬ್ಬರಿಂದ ನಾಲ್ಕು ಜನರಿಗೆ ಕೆಲಸ ಸಿಗಬಹುದು. ಕುಟುಂಬದ ಉಳಿದ ಸದಸ್ಯರು ಬೇರೆಡೆ ವಲಸೆ ಹೋಗಬೇಕಿತ್ತು. ಇಲ್ಲವೇ ತಾವು ನೆಲೆಸಿದ ಸ್ಥಳದಲ್ಲಿಯೇ ದೊರೆಯುವ ಪ್ರಾಕೃತಿಕ ಸಂಪನ್ಮೂಲವನ್ನು ಬಳಸಿಕೊಂಡು ಬೇರೆ ಬೇರೆ ವೃತ್ತಿಗಳನ್ನು ಮಾಡಬೇಕಿತ್ತು ಅಥವಾ ಗ್ರಾಮಗಳಲ್ಲಿ ಕೂಲಿ ಅಥವಾ ಸೇವಕರಾಗಿ ಕಾರ್ಯ ನಿರ್ವಹಿಸಬೇಕಿತ್ತು. ಈ ಅವಕಾಶಗಳು ದೊರೆಯದಿದ್ದರೆ ವಲಸೆ ಅನಿವಾರ್ಯ ಆಗಿತ್ತು. ಮೀನುಗಾರಿಕೆಯಲ್ಲಿ ಇಂತಹ ತೊಂದರೆಗಳು ಕಡಿಮೆ. ಆ ಕಾರಣಕ್ಕೆ ವಿಭಕ್ತ ಕುಟುಂಬಗಳಾಗುತ್ತಿದ್ದವು. ಮಾನಸಿಕ ಸಂಬಂಧಗಳನ್ನು ಕಳೆದುಕೊಳ್ಳುತ್ತಿದ್ದವು. ಆರ್ಥಿಕ ಹಿನ್ನಡೆಯನ್ನು ಅನುಭವಿಸುತ್ತಿದ್ದವು. ಇದರಿಂದಾಗಿ ಮೀನುಗಾರಿಕೆಯಲ್ಲಿ ಹೆಚ್ಚು ಕುಟುಂಬಗಳು ತಮ್ಮನ್ನು ತಾವು ತೊಡಗಿಸಿಕೊಂಡವು. ಮೀನುಗಾರಿಕೆಗೆ ಯೋಗ್ಯವಾದ ಸ್ಥಳ ಮತ್ತು ಮೀನುಗಳನ್ನು ಬಳಸುವ ಜನಸಮುದಾಯಗಳನ್ನು ಹುಡುಕಿಕೊಂಡು ಹೋದವು. ಮೀನನ್ನು ಆಹಾರವಾಗಿ ಬಳಸುವ ಜನರ ಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಕುಟುಂಬಗಳು ನೆಲೆ ನಿಂತವು. ಅಂಬಿಗತನ ಮಾಡುತ್ತಿದ್ದ ಕುಟುಂಬಗಳ ಹಂಚಿಕೆ ಇದಕ್ಕಿಂತ ಭಿನ್ನ. 'ಆಹಾರಕೇಂದ್ರಿತ' ಜನಸಮುದಾಯದವರನ್ನು ಆಧರಿಸಿ ನೆಲೆನಿಂತಿಲ್ಲ. ಬದಲಾಗಿ 'ಜಲ ಸಂಚಾರ' ಜನಸಮುದಾಯವನ್ನು ಆಧರಿಸಿ ನೆಲೆ ನಿಲ್ಲುತ್ತಿತ್ತು. ಎರಡು ಹಳ್ಳ, ಉಪನದಿ, ನದಿಗಳ ಎರಡು ದಡಗಳಲ್ಲಿ ನೆಲೆಸಿದ್ದ ಸಮುದಾಯಗಳ ಸಾಂಸ್ಕೃತಿಕ ಸಂಬಂಧಗಳು ಮತ್ತು ವ್ಯವಹಾರಗಳು ವೃತ್ತಿಗೆ ಆಧಾರವಾಗಿದ್ದವು. ಹೀಗೆ ಜನರನ್ನೇ ಸಂಪನ್ಮೂಲವನ್ನಾಗಿ ಮಾಡಿಕೊಂಡಿದ್ದ ಟೋಕ್ರೆಕೋಲಿ ಸಮುದಾಯ ಮೀನುಗಾರಿಕೆ ಮತ್ತು ಎರಡು ದಡಗಳಲ್ಲಿ ನೆಲೆಸಿರುವ ಜನರಿಗೆ ಸಂಪರ್ಕ ಕಲ್ಪಿಸುವುದಕ್ಕೆ ಅನುಕೂಲ ಆಗುವ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ನೆಲೆ ನಿಂತಿತು.

ನೆಲೆ ನಿಂತ ನಂತರ ಅನೇಕ ಬದಲಾವಣೆಗಳಾದವು. ಹೊಳೆ, ಹಳ್ಳ, ನದಿಗಳಲ್ಲಿನ ನೀರು ಕಡಿಮೆ ಆದಾಗ ಅಂಬಿಗ ವೃತ್ತಿ ಮಾಡುವುದಕ್ಕೆ ಅವಕಾಶಗಳು ಕಡಿಮೆ ಆಗುತ್ತಿದ್ದವು. ಜನರು ಕಾಲ್ನಡಿಗೆಯಲ್ಲಿಯೇ ಒಂದು ದಡದಿಂದ ಮತ್ತೊಂದು ದಡಕ್ಕೆ ಹೋಗುತ್ತಿದ್ದರು. ಆಗ ಮೀನುಗಾರಿಕೆಯು ಸಹ ಕಡಿಮೆ ಆಗುತ್ತಿತ್ತು. ಅದೇ ಸ್ಥಳದಲ್ಲಿ ಸಿಗುವ ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸಿಕೊಂಡು ವೃತ್ತಿಗಳನ್ನು ಮಾಡುವುದಕ್ಕೆ ಆರಂಭಿಸಿದರು. ಉದಾಹರಣೆ ಸುಣ್ಣಗಾರಿಕೆ, ಬೇಟೆ ಮತ್ತು ಕೃಷಿ. ಇವರಿಗೆ ಸುಣ್ಣಗಾರಿಕೆ ಒಗ್ಗಿದಂತೆ ಬೇಟೆ ಮತ್ತು ಕೃಷಿ ಒಗ್ಗಲಿಲ್ಲ. ಕಾಲಾನಂತರ ಬೇಟೆ ತಮ್ಮ ಆಹಾರ ಸಂಗ್ರಹಣೆಗಾಗಿ ಸೀಮಿತ ಆಯಿತು. ಆರಂಭದಲ್ಲಿ ಕೃಷಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ವಿಧಾನ ಭಿನ್ನವಾಗಿದೆ. "ವಿಚಿತ್ರವೆಂದರೆ ಟೋಕ್ರೆಕೋಲಿಗಳು

ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD

IIMRD JOURNALS

ತಾವು ನೆಲೆಸಿದ ಸ್ಥಳದ ಸುತ್ತಮುತ್ತ ಹಸನು ಮಾಡಿಕೊಂಡಿದ್ದ ಭೂಮಿಯನ್ನು ಕಣ್ಣೆದುರೇ ಬೇರೆಯವರು ಉತ್ತಿ–ಬಿತ್ತಿ ತಮ್ಮದನ್ನಾಗಿಸಿಕೊಂಡರೂ ತಾವು ಉಳುಮೆ ಮಾಡಿ ವ್ಯವಸಾಯಗಾರರಾಗದೆ ಉಳಿದವರು. ವಿಪರ್ಯಾಸವೆಂದರೆ ಆ ಜಮೀನಿನಲ್ಲಿ ಕೂಲಿಗಳಾಗಿ ದುಡಿದವರು ಮತ್ತು ದುಡಿಯುತ್ತಿರುವವರು" (ಕರ್ನಾಟಕ ಬುಡಕಟ್ಟುಗಳು, ಸಂ. 2, ಪು. 360). ಆ ಕಾರಣಕ್ಕೆ ಇವರಲ್ಲಿ ಹಳ್ಳಿಗಳ ರೈತರ, ಉಳ್ಳವರ ಮನೆಯಲ್ಲಿ ಕೂಲಿ ಆಳುಗಳಾಗಿ, ಜೀತದಾಳುಗಳಾಗಿ ದುಡಿಯುವ ಪ್ರಕ್ರಿಯೆ ಆರಂಭವಾಯಿತು. ಅಂದರೆ ಕಾಲಾನುಕಾಲದಿಂದ ಕೃಷಿ ಕ್ಷೇತ್ರದಲ್ಲಿ 'ಸೇವಕ'ರಾಗಿ ಕಾರ್ಯನಿರ್ವಹಿಸಿದ್ದೇ ಹೆಚ್ಚು. ರಾಜರ ಆಳ್ವಿಕೆಯಲ್ಲೂ ಇವರನ್ನು ಸೇವಕ ಹುದ್ದೆಗಳಿಗೆ ಬಳಸಿಕೊಳ್ಳುತ್ತಿದ್ದರು. ದೈಹಿಕವಾಗಿ ಪ್ರಬಲರಾದ ಮತ್ತು ಸ್ವಾಮಿನಿಷ್ಠೆಗೆ ಹೆಸರುವಾಸಿಯಾದ ಇವರನ್ನು ತಳವಾರಿಕೆ, ವಾಲೀಕಾರ, ಜಾವಗಾರ ಮತ್ತು ಕುದುರೆಗೆ ನಡಿಗೆ ಕಲಿಸುವ ತರಬೇತಿದಾರ ಮುಂತಾದ 'ಸೇವಕ ವೃತ್ತಿ'ಗಳಿಗಾಗಿ ಬಳಸಿಕೊಂಡರು. ರಾಜರ ಆಳ್ವಿಕೆ ಮುಕ್ತಾಯವಾದ ನಂತರ ಈ ಸೇವೆ ಬೇರೆ ಸ್ವರೂಪ ಪಡೆಯಿತು. ಆ ವೃತ್ತಿಗಳು ಕಣ್ಮರೆಯಾದವು. ಆಗ ಹೆಣ ಕಾಯುವ, ಮುಸುರೆ ತಿಕ್ಕುವ, ಗಸ್ತಿ ಹಾಕುವ, ಎಕ್ಕಲೆ ಹಾಕುವ, ದನ ಕಾಯುವ ಮುಂತಾದ ವೃತ್ತಿಗಳಿಗಾಗಿ ಬಳಸಿಕೊಳ್ಳುವುದಕ್ಕೆ ಆರಂಭಿಸಿದರು. ನಂತರ ಇವುಗಳೇ ವೃತ್ತಿಗಳಾಗಿ ಮತ್ತು ಆ ವೃತ್ತಿಗಳು ಜಾತಿಗಳಾಗಿ ರೂಪಾಂತರಗೊಂಡವು. ಜೊತೆಗೆ ಈ ವೃತ್ತಿಗಳನ್ನು ಮಾಡಲೇಬೇಕಾದ ಅನಿವಾರ್ಯತೆ ಇವರಿಗಿತ್ತು. ಗ್ರಾಮಗಳಲ್ಲಿ ಉಳ್ಳವರು ತಮ್ಮ ವೈಯಕ್ತಿಕ ಜಗಳಗಳಿಗೆ ಇವರನ್ನು ಬಳಸಿಕೊಂಡರು. "ಟೋಕ್ರೆಕೋಲಿಗಳು ಗ್ರಾಮದ ಮುಖ್ಯಸ್ಥನಾದ ಗೌಡರ ಮಾತುಗಳನ್ನು ಕೇಳಿಕೊಂಡು ಅಧೀನರಾಗಿ ಇದ್ದುದ್ದೇ ಹೆಚ್ಚು. ತಮ್ಮ ಜೀವನಕ್ಕಿಂತ ಹೆಚ್ಚಾಗಿ ಬೇರೆಯವರ ಬದುಕಿಗೆ ಆಸರೆಯಾದವರು. ಊರಿನ ನಾಯಕರು ಜಗಳ ಆಡುವಾಗ ನಾಯಕರು ನೇರವಾಗಿ ಭಾಗಿಯಾಗುತ್ತಿರಲಿಲ್ಲ. ಈಗಲೂ ಆಗುವುದಿಲ್ಲ. ದೈಹಿಕವಾಗಿ ಪ್ರಬಲರಾಗಿದ್ದ ಟೋಕ್ರೆಕೋಲಿಗಳನ್ನು ಯಥೇಚ್ಛವಾಗಿ ಬಳಸಿಕೊಂಡರು"(ಡಾ. ಶ್ರೀರಾಮ ಇಟ್ಟಣ್ಣವರ ಬೀಳಗಿ, ವ: 63). ಹಾಗಾಗಿ ಬಿಜಾಪುರ, ಬೆಳಗಾವಿ, ಬೀದರ್, ಧಾರವಾಡ ಜೈಲುಗಳಲ್ಲಿ ಇವರ ಸಂಖ್ಯೆ ಹೆಚ್ಚಾಗಿದೆ.

ಟೋಕ್ರೆಕೋಲಿಗಳು ಇತರ ವೃತ್ತಿಗೆ ತಮ್ಮನ್ನು ಸಂಪೂರ್ಣ ಒಗ್ಗಿಸಿಕೊಂಡಂತೆ ಕಾಣಿಸುತ್ತಿಲ್ಲ. ತಮ್ಮ ಮೂಲ ವೃತ್ತಿಗಳಾದ 'ಮೀನುಗಾರಿಕೆ' ಮತ್ತು 'ಅಂಬಿಗ' ವೃತ್ತಿಗಳನ್ನು ಇಷ್ಟಪಡುತ್ತಿದ್ದಾರೆ. ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿ ನಶಿಸುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಮೀನುಗಾರಿಕೆಗಾಗಿ ಬಳಸುವ ಆಧುನಿಕ ಸಾಮಗ್ರಿಗಳನ್ನು ತೀವ್ರವಾಗಿ ವಿರೋಧಿಸುವುದಕ್ಕೆ ಆರಂಭಿಸಿದ್ದಾರೆ. ಮೀನಿನ ಸಂತತಿಯ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಕುರಿತು ಚರ್ಚೆ ಮಾಡುತ್ತಿದ್ದಾರೆ. ಪಾರಂಪರಿಕ ವಿಧಾನಗಳನ್ನು ಬಳಸುವುದಕ್ಕೆ ಅಥವಾ ಮುಂದುವರೆಸುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಸಣ್ಣ ಪ್ರಮಾಣದ ನೀರಿನಲ್ಲಿ ಹಳ್ಳ, ಕೆರೆ, ಗುಂಡಿಗಳಲ್ಲಿ ಕಡ್ಡಾಯವಾಗಿ ಪಾರಂಪರಿಕ ಪದ್ಧತಿಯನ್ನು ಅನುಸರಿಸಲೇಬೇಕು ಎನ್ನುವ ಮನಃಸ್ಥಿತಿಗೆ ಬಂದಿದ್ದಾರೆ. ಈ ಕಾಳಜಿ ಅಂಬಿಗ ವೃತ್ತಿಯ ಬಗ್ಗೆ ಇಲ್ಲ. ಆದರೆ ಅಂಬಿಗ ವೃತ್ತಿಯ ಬಗ್ಗೆ ವಿಶೇಷವಾದ ನಂಬಿಕೆಗಳಿವೆ. ನಮ್ಮ ಕುಲಮೂಲ ವೃತ್ತಿ, ಶಿವನಿಂದ ಒಲಿದ ವೃತ್ತಿ ಎನ್ನುವ ನಂಬಿಕೆಗಳು ಗಾಢವಾಗಿವೆ. ಕುಲಕ್ಕೆ ಸಂಬಂಧಿಸಿದ ಸಾಮೂಹಿಕ ಆಚರಣೆಗಳಲ್ಲಿ ಮತ್ತು ಕುಟುಂಬದ ಕುಲಮೂಲ ಆಚರಣೆಗಳಲ್ಲಿ 'ಹರಿಗೋಲು' ಮತ್ತು 'ಬುಟ್ಟಿ'ಗಳನ್ನು ಪೂಜಿಸುತ್ತಾರೆ. ಆಯುಧ ಪೂಜೆ, ಯುಗಾದಿ ಮುಂತಾದ ಸಂದರ್ಭಗಳಲ್ಲಿ ಕೆಲವು ಕುಟುಂಬಗಳು ಕಡ್ಡಾಯ ಎನ್ನುವಂತೆ ಪೂಜಿಸುತ್ತವೆ. ಇದು ಪರಂಪರೆಯಿಂದ

ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
IIMRD JOURNALS

ನಡೆದುಕೊಂಡ ಬಂದ ಪದ್ಧತಿ ಎನ್ನುತ್ತಾರೆ. ಇವರ ಕುಲಮೂಲ ಕಥನಗಳಲ್ಲಿ ಅಂಬಿಗ ವೃತ್ತಿಯ ವಿವಿಧ ಆಯಾಮಗಳು ಕಂಡುಬರುತ್ತವೆ. ಈ ಕಥನಗಳನ್ನು ಜೀವಂತಗೊಳಿಸಿಕೊಂಡು ಹೋಗುವುದಕ್ಕೆ ಇಷ್ಟಪಡುತ್ತಾರೆ. ಒಟ್ಟಾರೆಯಾಗಿ ಅಂಬಿಗ ವೃತ್ತಿ ಅಳಿವಿನ ಅಂಚಿನಲ್ಲಿ ಇದ್ದರೂ ಆ ವೃತ್ತಿಯ ಬಗ್ಗೆ ಇರುವ ನಂಬಿಕೆ ಮತ್ತು ಗೌರವಗಳು ಈ ಸಮುದಾಯದಲ್ಲಿ ಕಡಿಮೆ ಆಗಿಲ್ಲ.

**ಆಚರಣೆ ಮತ್ತು ಸಂಪ್ರದಾಯಗಳು**

ಪ್ರತಿಯೊಂದು ಕುಲದಲ್ಲೂ ನಂಬಿಕೆ, ಸಂಪ್ರದಾಯ ಮತ್ತು ಆಚರಣೆಗಳು ಇವೆ. ಕುಲದಿಂದ ಕುಲಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿವೆ. ಜೊತೆಗೆ ಆಯಾ ಕುಲದ ಪಾರಂಪರಿಕ ಮೂಲಭೂತ ಗುಣಗಳನ್ನು ಅನಾವರಣ ಮಾಡುತ್ತಿವೆ. ಟೋಕ್ರೆಕೋಲಿ ಸಮುದಾಯದಲ್ಲಿರುವ ಸಂಪ್ರದಾಯ ಮತ್ತು ಆಚರಣೆಗಳು ಇದಕ್ಕೆ ಹೊರತಾಗಿಲ್ಲ. ಜನನ, ಮದುವೆ ಮತ್ತು ಮರಣ ಇತ್ಯಾದಿ ವಿಷಯಗಳಿಗೆ ಮತ್ತು ಸಂದರ್ಭಗಳಿಗೆ ಅನುಗುಣವಾಗಿ ಹಲವಾರು ಆಚರಣೆ ಮತ್ತು ಸಂಪ್ರದಾಯಗಳನ್ನು ಮಾಡುತ್ತಾರೆ. ಇವು ವಿಶಿಷ್ಟವಾದ ಸಾಂಸ್ಕೃತಿಕ ಅಸ್ಮಿತೆಯನ್ನು ಹೊಂದಿವೆ. ನಿಸರ್ಗದೊಂದಿಗೆ ಸಂಬಂಧ ಹೊಂದಿವೆ ಮತ್ತು ಆ ವಸ್ತುವಿನ ಜೊತೆ ಆರೋಗ್ಯ ಮತ್ತು ಒಳಿತಿನ ಪರಿಕಲ್ಪನೆಗಾಗಿ ಹೋಲಿಕೆ ಮಾಡಿಕೊಳ್ಳುತ್ತವೆ. ಅಂದರೆ ಪ್ರಕೃತಿಯಲ್ಲಿರುವ ವಸ್ತುವಿನಂತೆ ತಾವು ಇರಬೇಕು ಅಥವಾ ಆಗಬೇಕು ಎಂದು ದೈವವನ್ನು ಆರಾಧಿಸುತ್ತಾರೆ. ಈ ಪರಿಕಲ್ಪನೆಯನ್ನು ಕುರಿತು ಮಗುವಿನ ಜನನದ ಸಂದರ್ಭದಲ್ಲಿ ಮಾಡುವ ಆಚರಣೆ ಗಮನ ಸೆಳೆಯುತ್ತದೆ. ಮಗು ಜನಿಸಿದ ನಂತರ ತಾಯಿಯ ಮಾಸವನ್ನು ಸಂಗ್ರಹಿಸಿ ದನದ ಕೊಟ್ಟಿಗೆ ಅಥವಾ ಮನೆಯ ಅಂಗಳದಲ್ಲಿ ಹೂಳುವ ವಿಧಾನವಿದೆ. ಆಗ ತುಂಬಾ ಎಚ್ಚರ ವಹಿಸಬೇಕು ಎನ್ನುವ ನಿಯಮವಿದೆ. ಇದನ್ನು ತಪ್ಪದೇ ಪಾಲನೆ ಮಾಡುವುದಕ್ಕೆ ಇಷ್ಟಪಡುತ್ತಾರೆ. ಏಕೆಂದರೆ ಹೂಳುವಾಗ ಮಾಸದ ಮಡಿಕೆ ಯಾವುದಾದರೂ ಒಂದು ಭಾಗಕ್ಕೆ ವಾಲಿದರೆ ಮಗು 'ವಾಂತಿ' ಮಾಡಿಕೊಳ್ಳುತ್ತದೆ ಎನ್ನುವ ನಂಬಿಕೆ ಇವರದು. ಹಾಗಾಗಿ ನೇರವಾಗಿಟ್ಟು ಹೂಳುತ್ತಾರೆ. ನಂತರ ಆ ಸ್ಥಳದ ಮೇಲೆ ಅತ್ತಿ ಹಾಗೂ ಬೇವಿನ ಫಳಿಯನ್ನು ನೆಡುವ ಪ್ರಕ್ರಿಯೆ ವಿಶೇಷ. ಈ ಗಿಡವು ನಿಲ್ಲುವ ಸ್ವರೂಪದ ಮೇಲೆ ಮಗುವಿನ ಬೆಳವಣಿಗೆಯನ್ನು ಲೆಕ್ಕಾಚಾರ ಮಾಡುತ್ತಾರೆ. ಗಿಡ ನೇರವಾಗಿ ನಿಂತುಕೊಂಡರೆ ಮುಂದೆ ಮಗು ಒಳ್ಳೆಯತನದಲ್ಲಿ, ಸುಸಂಸ್ಕೃತನಾಗಿ ಆರೋಗ್ಯವಾಗಿ ಬೆಳೆಯುತ್ತದೆ. ಬಾಗಿದರೆ ಅನಾರೋಗ್ಯಕರವಾಗಿ, ಕೆಟ್ಟದಾಗಿ, ಅಸಂಸ್ಕೃತನಾಗಿ ಬೆಳೆಯುತ್ತಾನೆ ಎನ್ನುವ ಭಾವನೆ. ಇದನ್ನು ಗಿಡ ಬಾಗಿದ ಪ್ರಮಾಣಕ್ಕೆ ಅನುಗುಣವಾಗಿ ಲೆಕ್ಕಾಚಾರ ಮಾಡುವ ಪದ್ಧತಿ ಇದೆ. ಕಡಿಮೆ ಪ್ರಮಾಣದಲ್ಲಿ ಬಾಗಿದರೆ ಸ್ವಲ್ಪ ಅನಾರೋಗ್ಯಕರವಾಗಿ, ಸ್ವಲ್ಪ ಕೆಟ್ಟದಾಗಿ, ಹೆಚ್ಚು ಬಾಗಿದರೆ ಹೆಚ್ಚು ಕೆಟ್ಟದಾಗಿ, ಅನಾರೋಗ್ಯಕರವಾಗಿ ಬೆಳೆಯುತ್ತದೆ ಎನ್ನುವ ಕಲ್ಪನೆ ಇವರದು. ಹೀಗೆ ಮಗು ಜನಿಸಿದ ದಿನಗಳಿಂದಲೂ ಅದರ ಬೆಳವಣಿಗೆಯ ಪ್ರತಿಯೊಂದು ಹಂತದಲ್ಲೂ ಒಳಿತು ಮತ್ತು ಕೆಡುಕಿನ ಬಗ್ಗೆ ಲೆಕ್ಕಾಚಾರ ಮಾಡುತ್ತಾ ಹೋಗುತ್ತಾರೆ ಹಾಗೂ ಚೆನ್ನಾಗಿರಲಿ ಎಂದು ಆರಾಧನೆ ಮಾಡುತ್ತಾರೆ. ಪ್ರಕೃತಿಯಲ್ಲಿರುವ ಗಟ್ಟಿ ವಸ್ತುಗಳಿಗೆ ಹೋಲಿಸಿಕೊಳ್ಳುತ್ತಾರೆ. ನಾಮಕರಣ ಸಂದರ್ಭದಲ್ಲಿ ಮಾಡುವ ಆಚರಣೆ ಭಿನ್ನವಾದದ್ದು. ನಾಮಕರಣ ದಿವಸ ಗಂಗೆಪೂಜೆಗಾಗಿ ಹೊಳೆ, ಹಳ್ಳ, ನದಿ ದಡಗಳಿಗೆ ಅಥವಾ ನೀರು ಇರುವ ಸ್ಥಳಗಳಿಗೆ ಹೋಗುತ್ತಾರೆ. ಒಂದು ತಂಬಿಗೆಯಲ್ಲಿ ನೀರು ತುಂಬಿಕೊಂಡು ಪೂಜೆ ಮಾಡಿ ನೀರಿನಲ್ಲಿ ಅಥವಾ ದಡದಲ್ಲಿರುವ ಐದು ಹರಳುಗಳನ್ನು ಆಯ್ಕೆ ಮಾಡಿಕೊಳ್ಳುವರು. ಇವುಗಳಿಗೆ 'ಸೆಟವಿ ಲಿಂಗಗಳು' ಎಂದು ಕರೆಯುವರು. ಸೆಟವಿ ಲಿಂಗಗಳನ್ನು

ಬಾಣಂತಿಯ ಕೋಣೆಗೆ ತಂದು ಬಟ್ಟೆ ಅಥವಾ ಕಂಬಳಿಯನ್ನು ಹಾಸಿ ಅವುಗಳ ಮೇಲೆ ನೀರು ತುಂಬಿದ ತಂಬಿಗೆ ಮತ್ತು ಹರಳುಗಳನ್ನು ಪೂರ್ವಾಭಿಮುಖವಾಗಿ ಇಡುತ್ತಾರೆ. ಇದು ಹೊಳೆ ಅಥವಾ ನದಿಗಳ ದಡದಲ್ಲಿ ಪಾಂಡವರನ್ನು ಪೂಜಿಸುವ ಪದ್ಧತಿಯಂತೆ ಕಾಣಿಸುತ್ತದೆ. ನೆಲಕ್ಕೆ ಹಾಸುವುದಕ್ಕೆ ಹಿಂದೆ ಬಟ್ಟೆಯನ್ನು ಬಳಸುತ್ತಿದ್ದರು. ಈಚೆಗೆ ಕೆಲವರು ಕಂಬಳಿಯನ್ನು ಬಳಸುತ್ತಾರೆ. ಕಂಬಳಿ ಬಳಕೆ ಗ್ರಾಮದ ಹೊರಗಡೆ ಇರುವ ಟೋಕ್ರೆಕೋಲಿಗಳಿಗಿಂತ ಗ್ರಾಮದ ಒಳಗಡೆ ಇರುವವರಲ್ಲಿ ಹೆಚ್ಚಾಗಿ ಬಳಕೆಯಲ್ಲಿದೆ. ಹಾಸಿಗೆಯ ಮೇಲೆ ಇಟ್ಟ ತಂಬಿಗೆ ಮತ್ತು ಹರಳುಗಳನ್ನು ಅರಿಶಿನ ಮತ್ತು ಕುಂಕುಮವನ್ನು ಬಳಸುತ್ತಾರೆ. ನಂತರ ಹಿಟ್ಟಿನಿಂದ ಐದು ಪಣತಿಗಳನ್ನು ತಯಾರಿಸಿ ಎಣ್ಣೆ ಹಾಕಿ ದೀಪ ಹಚ್ಚುವರು.

'ನಮ್ಮ ಮಗು ಯಾವುದೇ ಕಷ್ಟ–ನಷ್ಟಗಳಿಗೆ, ಅಗೋಚರ ಶಕ್ತಿಗಳಿಗೆ ಬಲಿಯಾಗದಂತೆ ಕಾಪಾಡಲಿ ಮತ್ತು ಕಲ್ಲಿನಂತೆ ಇರಲಿ' ಎಂದು ತಮ್ಮ ಆರಾಧ್ಯ ದೈವಕ್ಕೆ ಕೋರಿಕೆಯನ್ನು ಸಲ್ಲಿಸುತ್ತಾರೆ. ಇದು ನಂಬಿಕೆಯ ಆಚರಣೆಯಾಗಿದ್ದರೂ ಸಾಮಾಜಿಕ ಮೌಲ್ಯದಿಂದ ಕೂಡಿದೆ. ಮಗು ಆರೋಗ್ಯವಾಗಿರಲಿ, ಕುಟುಂಬಕ್ಕೆ, ಸಮುದಾಯಕ್ಕೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಲಿ ಎನ್ನುವ ಆಶಯವಿದೆ. ಮಗುವನ್ನು ಆರೋಗ್ಯಕರವಾಗಿ ಬೆಳೆಸಬೇಕು. ಅದು ಕುಟುಂಬಕ್ಕೆ ಸಂಬಂಧಪಟ್ಟ ಜವಾಬ್ದಾರಿ ಎನ್ನುವುದನ್ನು ಹೇಳುವುದಕ್ಕೆ ರೂಢಿಯಾಗಿರುವ ಸಾಧ್ಯತೆ ಇದೆ. ನಂತರ ಈ ಆಶಯ ಕಡ್ಡಾಯ ನಿಯಮವೆನ್ನುವಂತೆ ಆಚರಣೆಯಾಗಿ ಜೀವಂತಿಕೆ ಪಡೆದಿದೆ. ಈಗ ಈ ಆಚರಣೆಯನ್ನು ಆಚರಿಸುವ ಪದ್ಧತಿ ಕಡಿ ಜನನದ ಸಂದರ್ಭದಲ್ಲಿ ಮಾಡುವ ಆಚರಣೆ ಗಮನ ಸೆಳೆಯುತ್ತದೆ.

ಪ್ರಕೃತಿಯನ್ನು ಆರಾಧಿಸುವುದರ ಜೊತೆಗೆ ಅಲ್ಲಿ ಸಿಗುವ ವಸ್ತುಗಳನ್ನು ಔಷಧಿಯನ್ನಾಗಿ ಬಳಸುತ್ತಾರೆ. ಗಿಡಮೂಲಿಕೆ ಮತ್ತು ಪ್ರಾಕೃತಿಕ ವಸ್ತುಗಳನ್ನು ರೋಗ ನಿವಾರಣೆಗಾಗಿ ಬಳಸುವರು. ಕೆಲವು ಹಿರಿಯ ವ್ಯಕ್ತಿಗಳು ಈಗಲೂ ಸಣ್ಣಪುಟ್ಟ ಕಾಯಿಲೆಗಳಿಗೆ ಆಸ್ಪತ್ರೆಗೆ ಹೋಗುವುದಿಲ್ಲ. ಕೆಲವೊಮ್ಮೆ ಗಿಡಮರಗಳ ಬೇರು, ತೊಗಟೆ, ಕಾಯಿ, ತೊಪ್ಪಲುಗಳನ್ನು ನೇರವಾಗಿ ಬಳಸುವ ವಿಧಾನವನ್ನು ಕಾಣಬಹುದು. ಉದಾಹರಣೆಗೆ ಹೆರಿಗೆ ಆದ ಸಂದರ್ಭದಲ್ಲಿ ಬಾಣಂತಿ ಇರುವ ಕೋಣೆಯ ಬಾಗಿಲು ಮತ್ತು ಕಿಟಕಿಗಳಿಗೆ ಬೇವಿನ ತೊಪ್ಪಲು ಕಟ್ಟುತ್ತಾರೆ. ನೀರಿನಲ್ಲಿ ಹಾಕಿ ಸ್ನಾನ ಮಾಡಿಸುತ್ತಾರೆ. ಅಲ್ಲದೆ ಎಣ್ಣೆಯಲ್ಲಿ ಬೇವಿನ ಎಸಳನ್ನು ಹಾಕಿ ಪ್ರಮಾಣಕ್ಕೆ ತಕ್ಕಂತೆ ಕಾಯಿಸಿ ಮೈಗೆ ಹಚ್ಚುವ ವಿಧಾನವಿದೆ. ಇದರಿಂದ ಬಾಣಂತಿಗೆ ರೋಗಗಳು ತಗಲುವುದಿಲ್ಲವೆಂದು ಹೇಳುತ್ತಾರೆ. ಇಂತಹ ಅನೇಕ ಪಾರಂಪರಿಕ ವೈದ್ಯ ಪದ್ಧತಿಗಳು ಕಡಿಮೆಯಾಗಿವೆ. ಆದರೂ ಕೆಲವು ಪ್ರದೇಶಗಳ ಟೋಕ್ರೆಕೋಲಿಗಳಲ್ಲಿ ಬಳಸುವ ವಿಧಾನವನ್ನು ಕಾಣಬಹುದಾಗಿದೆ.

ಋತುಮತಿಯಾದ ಹುಡುಗಿಯನ್ನು ಮನೆಯಲ್ಲಿ ಇಟ್ಟುಕೊಳ್ಳುವುದು ಮನೆತನಕ್ಕೆ ಅಪರಾಧವೆಂದು ನಂಬುತ್ತಿದ್ದರು. ಒಂದು ವೇಳೆ ಮನೆಯವರು ಇಟ್ಟುಕೊಂಡಿದ್ದರೆ ಸಮುದಾಯದವರು ಆ ಮನೆಗೆ ಹೆಂಡೆ ಬಡಿಯುತ್ತಿದ್ದರು. ಋತುಮತಿಯಾದ ಮಗಳನ್ನು ಮನೆಯಲ್ಲಿ ಇಟ್ಟುಕೊಂಡರೆ ಮುಂದೆ ಮನೆತನದವರ ಮುಖಕ್ಕೆ ಮತ್ತು ಮನೆತನಕ್ಕೆ ಹೆಂಡೆ ಬಳಸಿಕೊಳ್ಳುವ ಸಂದರ್ಭಗಳು ಬರಬಹುದು ಎಂದು ತಿಳಿದುಕೊಳ್ಳುತ್ತಿದ್ದರು. ಮುನ್ಸೂಚನೆ ನೀಡುವ ರೀತಿಯಲ್ಲಿ ಸಾಂಕೇತಿಕವಾಗಿ ಮನೆಗೆ ಹೆಂಡೆಯನ್ನು ಹಚ್ಚುತ್ತಾರೆ. ಇದನ್ನು ಅರಿತು ಮನೆಯವರು ಬೇಗನೆ ಮದುವೆ ಮಾಡುತ್ತಾರೆ. ಹಾಗಾಗಿ ಹುಡುಗಿ ಋತುಮತಿಯಾದ

ಪ್ರತಿಬಿಂಬ
IIMRD JOURNALS
PRATIBIMBA – Multidisciplinary Kannada Research Journal of IIMRD

ಕೆಲವೇ ತಿಂಗಳಲ್ಲಿ ವಿವಾಹ ಮಾಡುತ್ತಿದ್ದ ಪದ್ಧತಿ ರೂಢಿಯಲ್ಲಿತ್ತು. ಕೆಲವರು ಋತುಮತಿಯಾದ ನಂತರ ಹುಡುಗ ಸಿಗದಿದ್ದರೆ ಮನೆಗೆ ಯಾಕೆ ಹೆಂಡೆ ಹಚ್ಚಿಸಿಕೊಳ್ಳಬೇಕೆಂದು ಋತುಮತಿಯಾಗುವ ವಯಸ್ಸಿಗೆ ಬರುತ್ತಿದ್ದಂತೆ ವಿವಾಹ ಮಾಡುತ್ತಿದ್ದರು. ಇದು ಮಹಿಳೆಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿತ್ತು. ಗರ್ಭಿಣಿ, ಹೆರಿಗೆ ಮುಂತಾದ ಸಮಯಗಳಲ್ಲಿ ಸಾವು-ನೋವುಗಳು ಆಗುತ್ತಿದ್ದವು, ಟೋಕ್ರೆಕೋಲಿಗಳ ಮಹಿಳೆಯರು ಶಿಕ್ಷಣದಲ್ಲಿ ಹಿಂದುಳಿಯುವುದಕ್ಕೆ ಇಂತಹ ಅನೇಕ ಆಚರಣೆಗಳು ಕಾರಣವಾಗಿವೆ. ಇದನ್ನು ಅರಿತ ಹಿರಿಯರು, ಪ್ರಜ್ಞೆಯುಳ್ಳವರು ಈ ಆಚರಣೆ ಮಾಡುವುದಕ್ಕೆ ಮನೆಯಲ್ಲಿ ಒಪ್ಪುತ್ತಿಲ್ಲ. ಶಿಕ್ಷಣ ಪಡೆದ ಹುಡುಗಿಯರು ವಿರೋಧ ಮಾಡುತ್ತಿದ್ದಾರೆ. ಈ ಆಚರಣೆ ಮಾಡುವುದಕ್ಕೆ ಮತ್ತು ಬಾಲ್ಯವಿವಾಹಕ್ಕೆ ಒಪ್ಪುತ್ತಿಲ್ಲ. ಕೆಲವು ಕಡೆ ಹಿರಿಯರು ಈ ಆಚರಣೆಯನ್ನು ಮಾಡುವುದು ಅಪರಾಧವೆಂದು ಕುಲ ಪಂಚಾಯಿತಿಗಳಲ್ಲಿ ತಿಳಿಸಿದ್ದಾರೆ. ಹಾಗಾಗಿ ಈ ಅಚರಣೆ ಕಣ್ಮರೆಯಾಗುವ ಹಂತದಲ್ಲಿದೆ.

**ಸಮುದಾಯ ಸ್ಥಿತಿಗತಿ**

ಕೋಲಿಗಳು ಪರಂಪರೆಯಿಂದಲೂ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಾಗಿದ್ದಾರೆ. ಇವತ್ತು ಹಿಂದಿನ ದಿನಮಾನಗಳಿಗಿಂತಲೂ ಕೆಲವು ಕ್ಷೇತ್ರದಲ್ಲಿ ವೃತ್ತಿ ಮಾಡುತ್ತಿರುವವರು ತೀರ ಹಿನ್ನಡೆಯನ್ನು ಅನುಭವಿಸುತ್ತಿದ್ದಾರೆ. ಇದಕ್ಕೆ ಪಾರಂಪರಿಕವಾಗಿ ಮಾಡಿಕೊಂಡು ಬಂದಿರುವ ವೃತ್ತಿಗಳು ಮತ್ತು ಆ ವೃತ್ತಿಗಳ ಮೇಲೆ ಆಗಿರುವ ಪರಿಣಾಮಗಳು ಕಾರಣ. ಅಂಬಿಗತನ ಮತ್ತು ಮೀನುಗಾರಿಕೆ ಇವರ ಮೂಲವೃತ್ತಿಗಳು. ಈ ವೃತ್ತಿಗಳನ್ನು ಪ್ರಧಾನವಾಗಿಟ್ಟುಕೊಂಡು ತಾವು ನೆಲೆಸಿದ ಸ್ಥಳದಲ್ಲಿ ಸಿಗುವ ಪ್ರಾಕೃತಿಕ ಸಂಪನ್ಮೂಲಗಳನ್ನು ಆಧರಿಸಿ ಉಪವೃತ್ತಿಗಳನ್ನು ಮಾಡುತ್ತಿದ್ದರು. ಉದಾಹರಣೆಗೆ 'ಸುಣ್ಣಗಾರಿಕೆ' ಮತ್ತು 'ಉರುವಲು ಕಟ್ಟಿಗೆ' ಮಾರಾಟ. ಪ್ರಧಾನ ವೃತ್ತಿಗಳ ಮೇಲೆ ಆದ ಪರಿಣಾಮದಿಂದ ಉಪವೃತ್ತಿಗಳು ಕಣ್ಮರೆಯಾದವು. ಈ ಪರಿಣಾಮಗಳು ಇವರನ್ನು ಹೀನಾಯ ಸ್ಥಿತಿಗೆ ತಳ್ಳಿದವು. ಆರ್ಥಿಕ ಸ್ಥಿತಿಯನ್ನು ಬದಲಾಯಿಸಿತು. ಜೀವನ ವಿಧಾನವನ್ನೇ ಬದಲಾಯಿಸಿತು. ಜೀವನೋಪಾಯಕ್ಕೆ ಅನ್ಯಮಾರ್ಗಗಳನ್ನು ಹುಡುಕಿಕೊಳ್ಳಲೇಬೇಕಾದ ಅನಿವಾರ್ಯತೆಯನ್ನು ಉಂಟುಮಾಡಿತು. ಬದುಕಿಗಾಗಿ ಅನ್ಯಮಾರ್ಗಗಳನ್ನು ಆರಂಭಿಸಿದರು. ಈಗಲೂ ಹುಡುಕಾಟ ನಿಂತಿಲ್ಲ. ಆ ಹುಡುಕಾಟ ಅತಂತ್ರ ಸ್ಥಿತಿಯನ್ನು ಹೆಚ್ಚಿಸುತ್ತಿದೆ.

ಮೀನುಗಾರಿಕೆಯ ಮೇಲೆ ಆದ ಪರಿಣಾಮ ಇದಕ್ಕಿಂತ ಭಿನ್ನವಾದದ್ದು. ಅಣೆಕಟ್ಟುಗಳನ್ನು ಕಟ್ಟಿದ ನಂತರ ಸಣ್ಣ ಸಣ್ಣ ಗುಂಡಿಗಳು, ಕೆರೆಗಳು, ಹಳ್ಳಗಳು ಮತ್ತು ಉಪನದಿಗಳು ಕಣ್ಮರೆಯಾದವು. ಆ ಸ್ಥಳಗಳನ್ನು ಕಳೆದುಕೊಂಡ ಟೋಕ್ರೆಕೋಲಿಗಳಿಗೆ ಬೇರೆ ಸ್ಥಳಗಳಲ್ಲಿ ಸ್ಥಳಾವಕಾಶವನ್ನು ಕಲ್ಪಿಸಿಕೊಟ್ಟರು. ಆದರೆ ಮೂಲ ಸ್ಥಳಗಳಲ್ಲಿ ಇದ್ದ ವೃತ್ತಿ ಅವಕಾಶಗಳು ಮತ್ತು ವೃತ್ತಿ ಸಂಬಂಧಗಳಿಗೆ ಬೇಕಾದ ವಾತಾವರಣ ಇರಲಿಲ್ಲ. ಇದರಿಂದ ಬದುಕಿಗಾಗಿ ಹೊಸ ಹೊಸ ವೃತ್ತಿಗಳನ್ನು ಮಾಡಲೇಬೇಕಾಯಿತು. ಆರ್ಥಿಕವಾಗಿ ಹಿಂದುಳಿದವರಾಗಿದ್ದ ಕಾರಣ ಬಂಡವಾಳ ಹಾಕಿ ವೃತ್ತಿಗಳನ್ನು ಮಾಡುವ ಸ್ಥಿತಿಯಲ್ಲಿ ಇರಲಿಲ್ಲ. ಹಾಗಾಗಿ ಕೆಳದರ್ಜೆಯ ಕೆಲಸಗಳನ್ನು ಆಯ್ಕೆ ಮಾಡಿಕೊಂಡರು. ವೃತ್ತಿಗಳಿಗಾಗಿ ಅಲೆಮಾರಿಗಳಾದರು. ಇಲ್ಲಿ ಹೆಚ್ಚು ಕುಟುಂಬಗಳು ಇದಕ್ಕೆ ಬಲಿ ಆದವು. ಅಂದರೆ ಅಂಬಿಗತನ ಸಣ್ಣ ಸಣ್ಣ ಕುಟುಂಬಗಳ ಗುಂಪುಗಳ ಮೇಲೆ

ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
IIMRD JOURNALS

ಪರಿಣಾಮ ಬೀರಿದರೆ ಮೀನುಗಾರಿಕೆ ದೊಡ್ಡ ದೊಡ್ಡ ಗುಂಪುಗಳ ಮೇಲೆ ಪರಿಣಾಮ ಬೀರಿತು. ಹಿಂದೆ ಹೇಳಿದಂತೆ ಮೀನುಗಾರಿಕೆ ಮತ್ತು ಅಂಬಿಗ ವೃತ್ತಿಗೆ ಬಳಕೆ ಆಗುವ ಜನಸಂಖ್ಯೆಗೆ ಅನುಗುಣವಾಗಿ ಗುಂಪುಗಳನ್ನು ಕಟ್ಟಿಕೊಂಡು ನೆಲೆಸಿದ್ದರು. ಮೀನುಗಾರಿಕೆ ಹೆಚ್ಚು ಜನರನ್ನು ಬಯಸುವ ವೃತ್ತಿಯಾಗಿದ್ದ ಕಾರಣಕ್ಕೆ ಅಥವಾ ಅಲ್ಲಿ ಹೆಚ್ಚು ಜನರಿಗೆ ಅವಕಾಶಗಳು ಇದ್ದ ಕಾರಣಕ್ಕೆ ಹೆಚ್ಚು ಜನರು ಸೇರಿ ಒಂದಾಗಿ ನೆಲೆಸಿದರು. ಸರಕಾರ ಮೀನುಗಾರಿಕೆಯಲ್ಲಿ ಗುತ್ತಿಗೆ ಮತ್ತು ಹರಾಜು ಪ್ರಕ್ರಿಯೆ ಆರಂಭಿಸಿದ ನಂತರ ಮತ್ತಷ್ಟು ಬಂಡವಾಳಶಾಹಿಗಳು ಮೀನುಗಾರಿಕೆಯ ಕ್ಷೇತ್ರಕ್ಕೆ ಆಗಮಿಸಿದರು. ಉಳಿದ ಚಿಕ್ಕಪುಟ್ಟ ಮೀನುಗಾರಿಕೆಯ ಸ್ಥಳಗಳು ಸಂಪೂರ್ಣವಾಗಿ ಬಂಡವಾಳಿಗರ ಕೈ ಸೇರಿದವು. ಹಾಗಾಗಿ ಮೀನುಗಾರಿಕೆಯ ಮೇಲೆ ಆದ ಪರಿಣಾಮ ದೊಡ್ಡದು. ಇದರಿಂದ ಟೋಕ್ರೆಕೋಲಿಗಳ ಸಾಮೂಹಿಕ ಜೀವನದ ಮೇಲೆ ಹೊಡೆತ ಬಿತ್ತು. ಗುಂಪುಗಳು ಛಿದ್ರಗೊಂಡವು. ಭಿನ್ನವೃತ್ತಿಗಳನ್ನು, ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡವು, ಜೊತೆಗೆ ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಪ್ರಕ್ರಿಯೆಯ ಮೇಲೆ ಹೊಡೆತ ಬಿತ್ತು. ಈ ಮೂರು ಪ್ರಕ್ರಿಯೆಗಳನ್ನು ಯಾವ ಸಮುದಾಯಗಳು ರೂಢಿಸಿಕೊಳ್ಳುವುದಿಲ್ಲವೋ ಆ ಸಮುದಾಯಗಳು ಸಮಾಜದಲ್ಲಿ ತಮ್ಮ ಅಸ್ಮಿತೆಯನ್ನು ಸ್ಥಾಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಡಾ. ಬಿ.ಆರ್. ಅಂಬೇಡ್ಕರ್ ಅವರು ಹೇಳುತ್ತಾರೆ. ಈ ಕ್ಷೇತ್ರಗಳಲ್ಲಿ ಹಿನ್ನಡೆಯನ್ನು ಅನುಭವಿಸುತ್ತಿರುವುದರಿಂದಲೇ ಟೋಕ್ರೆಕೋಲಿಗಳು ಹಿಂದುಳಿಯುವುದಕ್ಕೆ ಮತ್ತು ಇವತ್ತು ಹೆಚ್ಚು ಸಮಸ್ಯೆಗಳನ್ನು ಅನುಭವಿಸುವುದಕ್ಕೆ ಪ್ರಮುಖ ಕಾರಣವಾಗಿದೆ.

ಇವತ್ತು ಕೆಲವು ಕುಟುಂಬಗಳು ಕೃಷಿಯನ್ನು, ಕೃಷಿ ಕೂಲಿಯನ್ನು ಮಾಡುತ್ತಿವೆ. ಸುಮಾರು 100 ವರ್ಷಗಳಿಗಿಂತ ಮುಂಚೆ ಯಾವ ಕುಟುಂಬಗಳು ಒಂದು ಕಡೆ ನೆಲೆ ನಿಂತು ವ್ಯಾಪಾರ ಮತ್ತು ಇತರ ವೃತ್ತಿಗಳನ್ನು ಮಾಡುತ್ತಿದ್ದರೂ ಅವರು ಕೃಷಿಕರಾಗಿರುವುದು ಹೆಚ್ಚು. ಇವರು ಸಹ ಅಲ್ಪ ಪ್ರಮಾಣದ ಭೂಮಿಯನ್ನು ಹೊಂದಿದ್ದಾರೆ. ಜೊತೆಗೆ ಕೃಷಿ ಕೂಲಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಶಿಕ್ಷಣ ಪಡೆದು ಸರಕಾರಿ ಮತ್ತು ಸಂಸ್ಥೆಗಳಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ಪಾರಂಪರಿಕ ವೃತ್ತಿಗಳನ್ನು ಅವಲಂಬಿಸಿ ಜೀವನ ನಡೆಸುತ್ತಿರುವುದು ಇವತ್ತು ಕೂಡ ಹೆಚ್ಚಾಗಿ ಕಂಡುಬರುವುದನ್ನ ಕಾಣಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಡಾ ಎಚ್.ಜೆ. ಲಕ್ಕಪ್ಪಗೌಡ (1998), ಕರ್ನಾಟಕದ ಬುಡಕಟ್ಟು ಸಮುದಾಯ ಭಾಗ–1 ಮತ್ತು 2 ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
- ಡಾ.ಎಸ್.ಕೆ.ಮೇಲಕಾರ, ಅಂಬಿಗರ ಐಸಿರಿ ವಜ್ರಮಹೋತ್ಸವ, ಸ್ಮರಣ ಸಂಪುಟ. ಪ್ರಕಾಶಕರು: ಗಂಗಾಪರಮೇಶ್ವರಿ ಪ್ರಕಾಶ, ಕರ್ನಾಟಕ ರಾಜ್ಯ ಗಂಗಾಮತಸ್ಥರ ಸಂಘ, ನಗರ್ತರಪೇಟೆ, ಬೆಂಗಳೂರು. 02
- ಡಾ ಕೆ. ಎಂ ಮೈತ್ರಿ, (2002) ಬುಡಕಟ್ಟು ಕುಲಕಸುಬುಗಳು, ಪ್ರಕಾಶಕರು: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ
- ಹೇಮಲತಾ,ಡಿ.ಮಾಧಗೊಂಡ, (2001), ಬೀದರ ಜಿಲ್ಲೆಯ ಟೋಕ್ರೆ ಕೋಳಿ ಒಂದು ಸಾಂಸ್ಕೃತಿಕ ಅಧ್ಯಯನ ಪಿಎಚ್.ಡಿ ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ (ಅಪ್ರಕಟಿತ)
- ಡಾ.ಎಲ್.ಶ್ರೀನಿವಾಸ, (2013) ಕರ್ನಾಟಕ ಗಂಗಾಮತ ಹಾಗೂ ಅದರ ಉಪಜಾತಿಗಳು ಕುಲಶಾಸ್ತ್ರೀಯ ಅಧ್ಯಯನ, ಮಾನವಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ(ಕುಲಶಾಸ್ತ್ರೀಯ ಅಧ್ಯಯನ ವರದಿ)
- Roy S, (1987), Koli Culture in Landmark in Indian Anthropology vol 38 Cosmo publication, New Delhi,INDIA
- Roy Shibani , (1993), Koli culture, Cosmo publication, New Delhi - INDIA.
- Buchanar Francis, (1807), A Journey from Madras through the countries of Mysore, Canara and Malabar, Vol.2 London.